ಬಾಪು ಪ್ರಪಂಚ

BAAPU PRAPANCHA


ಅಕ್ಟೋಬರ್ - 2017

KANNADA ENGLISH MONTHLY

VOLUME-1 ISSUE-1 KARBIL02239 BANGALORE NOVEMBER Price Rs.5/-



ಮಕ್ಕಳ ಹಕ್ಕುಗಳು ಮತ್ತು ವಿಶ್ವಸಂಸ್ಥೆ



ಗಾಂಧೀಜಿ : ಸಮಾಜ ಜಾಗೃತಿ–ಪರಿವರ್ತನೆ ಕಾರ್ಯಕ್ಕೆ ಸ್ಫೂರ್ತಿ

ಸುಮಾರು 23 ವರ್ಷದ ಆ ಭಾರತೀಯ ಯುವ ನ್ಯಾಯವಾದಿ ದ.ಆಫ್ರಿಕಾದ ವಿಮಾನ ನಿಲ್ದಾಣ ನಗರ ಡರ್ಬನ್‌ನಲ್ಲಿ ಕಾಲೂರಿದ್ದು ತನ್ನ ವೃತ್ತಿ ಜೀವನವನ್ನು ಸುಭದ್ರಗೊಳಿಸಿಕೊಳ್ಳುವುದಕ್ಕಾಗಿ. ಸಂಕೋಚ ಸ್ವಭಾವದ, ನಿರರ್ಗಳವಾಗಿ ಮಾತಾಡುವುದನ್ನು ಕಲಿತಿರದ ಈ ಯುವಕ, ತನ್ನ ಕಕ್ಷಿದಾರರ ಪರವಾಗಿ ವಕಾಲತ್ತು ವಹಿಸಲು ಅಲ್ಲಿಗೆ ಬಂದಿದ್ದ. ಅಲ್ಲಿ ಆತ ತನ್ನ ಕಾರ್ಯವನ್ನು ಬಹುಮಟ್ಟಿಗೆ ಸಾಧಿಸಿದ. ಇಷ್ಟೇ ಆಗಿದ್ದರೆ, ಆ ಯುವಕ ಎಷ್ಟೋ ಜನರಲ್ಲಿ ಒಬ್ಬನಾಗಿರುತ್ತಿದ್ದ.

ಆ ಯುವಕ ತನ್ನ ವೃತ್ತಿಯ ಕಕ್ಷೆಯೊಳಗಷ್ಟೇ ಇರಲು ಬಯಸಲಿಲ್ಲ; ಸಮಾಜ ಜಾಗೃತಿ ಮತ್ತು ಸೇವಾ ಕಾರ್ಯವನ್ನು ಪ್ರೀತಿ, ನಿಷ್ಠೆ ಮತ್ತು ಭರವಸೆಯೊಂದಿಗೆ ಕೈಗೆತ್ತಿಕೊಳ್ಳಲು ಧೃಡ ನಿರ್ಣಯ ಕೈಗೊಂಡ; ತನ್ನ ವೃತ್ತಿಯ ಜೊತೆಗೆ ಸಾಮಾಜಿಕ ಜವಾಬ್ದಾರಿಯನ್ನು ನಿರ್ವಹಿಸಲು ಧೃಡ ನಿರ್ಧಾರ ಮಾಡಿ, ಒಂದು ಹೆಜ್ಜೆ ಆ ದಿಕ್ಕಿನಲ್ಲಿ ಇಟ್ಟಿದ್ದ. ಅಲ್ಲಿನ ಗಣಿಕಾರ್ಮಿಕರ ದಯನೀಯ ಪರಿಸ್ಥಿತಿಯು ಗಮನಕ್ಕೆ ಬಂದ ಕೂಡಲೇ, ಅವರ ಪರವಾಗಿ ಆತ ದನಿ ಎತ್ತಿದ. ಅವರಿಗೆ ನ್ಯಾಯ ದೊರಕಿಸಿಕೊಡಲು, ಅಲ್ಲಿನ ಸರ್ಕಾರ ಮತ್ತು ಇತರ ಪಟ್ಟಭದ್ರ ಶಕ್ತಿಗಳನ್ನು ಎದುರು ಹಾಕಿಕೊಳ್ಳಲು ಸಿದ್ಧನಾದ.

1894ರಲ್ಲಿ ಈ ಯುವಕನೇ ನತಾಲ್ ಭಾರತೀಯ ಕಾಂಗ್ರೆಸ್ ಸ್ಥಾಪಿಸಿದ. ದ.ಆಫ್ರಿಕಾಕ್ಕೆ ಬಂದ ಮೂರೇ ವರ್ಷಗಳಲ್ಲಿ ಆತ ಜನಪ್ರಿಯ, ಸುಪ್ರಸಿದ್ಧ ಹಾಗೂ ಧೃಡನಿಲವಿನ ಹೋರಾಟಗಾರ ಎನಿಸಿಕೊಂಡ. ಸಮುದಾಯ ಸಂಘಟನೆಗೆ ತನ್ನನ್ನು ಅರ್ಪಿಸಿಕೊಂಡ. ಅನ್ಯಾಯ ಮತ್ತು ತಾರತಮ್ಯವನ್ನು ಖಂಡಿಸಲು ಜನರಿಗೆ ಕರೆ ನೀಡಿದ. ಸಾರ್ವಜನಿಕ ಸಭೆಗಳನ್ನು ನಡೆಸಿದ. ಕರಪತ್ರ, ಮನವಿ, ಪತ್ರಿಕೆಗಳನ್ನು ಪ್ರಕಟಿಸಿ, ಜನಜಾಗೃತಿ ಕೈಗೊಂಡ.

‘ದ. ಆಫ್ರಿಕಾದಲ್ಲಿನ ಭಾರತೀಯರು ತಲಾ ಮೂರು ಪೌಂಡ್‌ಗಳನ್ನು ಚುನಾವಣಾ ತೆರಿಗೆಯಾಗಿ ನೀಡತಕ್ಕದ್ದು; ಟ್ರಾನ್ಸ್‌ವಾಲ್‌ನಲ್ಲಿನ ಎಲ್ಲಾ ಭಾರತೀಯರು ಸದಾ ತಮ್ಮ ಪಾಸ್‌ಗಳನ್ನು ಜೊತೆಗೆ ಇಟ್ಟುಕೊಂಡಿರತಕ್ಕದ್ದು; ಇಲ್ಲದೇ ಹೋದರೆ ದಂಡ ಮತ್ತು ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ’ ಎಂಬ ಏಕಪಕ್ಷೀಯ, ಅನ್ಯಾಯದ ಕಾಯ್ದೆ ಜಾರಿಗೊಂಡಾಗ, ಈ ಯುವಕ ಜನರನ್ನು ಒಗ್ಗೂಡಿಸಿ, ಅನ್ಯಾಯದ ಕಾನೂನನ್ನು ಮುರಿಯಲು ಮುಂದಾದ. 3000ಕ್ಕೂ ಹೆಚ್ಚು ಜನ ಭಾರತೀಯರನ್ನು ಸಂಘಟಿಸಿ, ಪ್ರತಿಭಟನೆ ನಡೆಸಿದ. ಆಡಳಿತದ ಬಲವನ್ನು ಎದುರಿಸಲು, ನಾಗರಿಕ ಅಸಹಕಾರವನ್ನು ಅಸ್ತ್ರವಾಗಿ ಪ್ರಯೋಗಿಸಿದ.

ಈ ವಿಷಯದಲ್ಲಿ ಆ ಯುವಕ ನಿರಂತರ ಜನ ಜಾಗೃತಿಯನ್ನು ಕೈಗೊಂಡ. ಆರು ವರ್ಷಗಳ ಕಾಲ ಈ ಪ್ರಯೋಗ ನಡೆಯಿತು. ಆಡಳಿತದಲ್ಲಿ ಯಾವುದೇ ಬದಲಾವಣೆ ಕಾಣಲಿಲ್ಲ. ಹೀಗಾಗಿ, ವರ್ಷದಿಂದ ವರ್ಷಕ್ಕೆ ಹೆಚ್ಚು ಹೆಚ್ಚು ಜನ ಭಾರತೀಯರು ಕಾಯ್ದೆಭಂಗ ಚಟುವಟಿಕೆಗಳಲ್ಲಿ ಭಾಗಿಯಾಗುತ್ತಾ ಹೋದರು.

6 ನವೆಂಬರ್ 1913ರಲ್ಲಿ ಈ ಯುವಕ ಸಹಸ್ರಾರು ಜನರ ಬೃಹತ್ ಮೆರವಣಿಗೆಗೆ ನೇತೃತ್ವ ನೀಡಿದ. ಅಂದು ಆತ ಅರೆಸ್ಟ್ ಆದ. ನ್ಯಾಯಾಲಯವು ಎಚ್ಚರಿಕೆ ನೀಡಿ, ಬಿಡುಗಡೆ ಮಾಡುತ್ತಲೇ, ಯುವಕ ಮತ್ತೆ ಪ್ರತಿಭಟನಾ ಮೆರವಣಿಗೆಯನ್ನು ಸೇರಿಕೊಂಡ; ಮತ್ತೆ ಅರೆಸ್ಟ್ ಆದ. ಇದು ಮುಂದುವರೆಯುತ್ತಲೇ ಹೋಯಿತು. ಕೊನೆಗೊಮ್ಮೆ, ನ್ಯಾಯಾಲಯವು ಸಹಸ್ರ ಸಹಸ್ರ ಜನರನ್ನು ಬಂಧಿಸುವ ಇರಾದೆಯಿಂದ ಹಿಂದಡಿ ಇಟ್ಟಿತು. ಹಕ್ಕೊತ್ತಾಯದಂತೆ ‘ಭಾರತೀಯ ಪರಿಹಾರ ಮಸೂದೆ’ಯನ್ನು ಕೈಬಿಡಲಾಯಿತು.

ಈ ಪ್ರಕ್ರಿಯೆಯಲ್ಲಿ ಆ ಯುವಕ, ವಿದೇಶದಲ್ಲೂ ಕೂಡ ಭಾರತೀಯರ ನಡುವೆ ಉಳಿದಿದ್ದ ಲಕ್ಷ್ಮಣ ರೇಖೆಗಳನ್ನು ಗುರುತಿಸಿದ. ಭಾರತೀಯರನ್ನು ಧಾರ್ಮಿಕವಾಗಿ, ಸಾಮಾಜಿಕವಾಗಿ ಮೊದಲು ಒಗ್ಗೂಡಿಸುವ ಸವಾಲನ್ನು ಸ್ವೀಕರಿಸಿದ. ಧರ್ಮ, ಜಾತಿ, ಪಂಥಗಳ ಆಚೆಗೆ ಭಾರತೀಯರು ಒಗ್ಗಟ್ಟಿನಿಂದ ಇರಬೇಕಾದ ಅವಶ್ಯಕತೆಯನ್ನು ಒತ್ತಿ ಹೇಳಿದ.

ಈ ಯುವಕನೇ ಮುಂದೆ ‘ಮಹಾತ್ಮಾ’ ಎನಿಸಿದ ಮೋಹನದಾಸ ಕರಮಚಂದ ಗಾಂಧಿ. ಯುವಕನಾಗಿದ್ದಾಗಲೇ ಸಾಮಾಜಿಕ ಬದ್ಧತೆ, ಸಂಘಟನಾ ಕೌಶಲ್ಯ, ಜನಹಿತ ನಿಷ್ಠೆಗೆ ತನ್ನನ್ನು ಅರ್ಪಿಸಿಕೊಂಡು, ಮುಂದೆ ಭಾರತವನ್ನು ಬ್ರಿಟಿಷ್ ಆಡಳಿತದಿಂದ ವಿಮೋಚನೆಗೊಳಿಸಿದ ಮೇರು ಹೋರಾಟಗಾರ. ನಮ್ಮೆಲ್ಲರಿಗೆ ಮಾರ್ಗದರ್ಶಿ.

ಬಾಪೂ ಪ್ರಪಂಚ

ಸಂಪುಟ–1 ಸಂಚಿಕೆ–1

ಕನ್ನಡ–ಇಂಗ್ಲೀಷ್ ಮಾಸಪತ್ರಿಕೆ

ನವೆಂಬರ್ 2017

ಸಂಪಾದಕ–ಪ್ರಕಾಶಕ
ಈ. ಬಸವರಾಜು
ಕಾರ್ಯದರ್ಶಿ

ಕರ್ನಾಟಕ ಗಾಂಧೀ ಸ್ಮಾರಕ ನಿಧಿ
ಗಾಂಧೀ ಭವನ
ಕುಮಾರ ಪಾರ್ಕ್ ಪೂರ್ವ
ಬೆಂಗಳೂರು–560 001

ಮಕ್ಕಳ ಸ್ಥಿತಿಗತಿ

ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷರು ಇತ್ತೀಚೆಗೆ ಪ್ರಕಟವಾದ ಒಂದು ಕಿರುಪುಸ್ತಕಕ್ಕೆ ಬರೆದಿರುವ ಈ ಮುಂದಿನ ಮಾತುಗಳು ಅಪಾರವಾಗಿ ಅರ್ಥಗರ್ಭಿತವಾಗಿವೆ.

'ಮಕ್ಕಳು ಮನುಕುಲದ ತಂದೆ–ತಾಯಿ', 'ಇಂದಿನ ಮಕ್ಕಳೇ ಇಂದಿನ ಪ್ರಜೆಗಳು' ಎಂಬಿತ್ಯಾದಿ ಮಾತುಗಳು ಆಗಾಗ್ಗೆ ನಮ್ಮ ಕಿವಿಗೆ ಬೀಳುತ್ತಿರುತ್ತವೆ. ಸಮಾಜದಲ್ಲಿ ಮಕ್ಕಳ ಮಹತ್ವ ಎಷ್ಟಿದೆ ಎನ್ನುವುದು ಇದರಿಂದ ನಮಗೆ ತಿಳಿಯುತ್ತದೆ. ಮಕ್ಕಳು ಭವಿಷ್ಯದ ಆಶಾಕಿರಣ ಗಳಾಗಿರುವುದರಿಂದ ಈ ಬಗ್ಗೆ ಯೋಚಿಸಬೇಕಾದುದು ನಮ್ಮ ಜವಾಬ್ದಾರಿಯಾಗಿದೆ. ಮಕ್ಕಳ ಉಜ್ವಲ ಭವಿಷ್ಯದ ಬಗ್ಗೆ ಹಲವಾರು ಕಾರ್ಯಕ್ರಮಗಳು, ಯೋಜನೆಗಳು, ಕಾನೂನುಗಳು ರಚನೆಯಾಗಿವೆ.

ಆದರೆ ಮೂಲಭೂತವಾಗಿ ನಮ್ಮ ಸಮಾಜದ ಆಧಾರ ಸ್ತಂಭವಾಗಿ ರೂಪುಗೊಳ್ಳುವ ಮಕ್ಕಳಲ್ಲಿ ನಾಯಕತ್ವ, ಚಿಂತನಾಶೀಲತೆ, ಸ್ವತಂತ್ರ ಮನೋಧರ್ಮ, ನಿರ್ಧಾರ ಕೈಗೊಳ್ಳುವ ಮನೋಭಾವ, ಪರಸ್ಪರರನ್ನು ಗೌರವಿಸಿಕೊಳ್ಳುವುದು, ಸೌಹಾರ್ದ ಮುಂತಾದ ಗುಣಾತ್ಮಕ ಅಂಶಗಳನ್ನು ವ್ಯಕ್ತಿತ್ವದಲ್ಲಿ ಎಳೆತನದಲ್ಲಿಯೇ ಬೆಳೆಸಬೇಕಾದುದು ಅತ್ಯಗತ್ಯವಾಗಿದೆ.

"ಪ್ರತಿ ವರ್ಷವೂ ನವೆಂಬರ್ ತಿಂಗಳಲ್ಲಿ 'ಮಕ್ಕಳ ಹಕ್ಕುಗಳಿಗಾಗಿ ವಿಶೇಷ ಗ್ರಾಮಸಭೆ'ಯನ್ನು ನಡೆಸಬೇಕು" ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಸುತ್ತೋಲೆ ಹೊರಡಿಸಿದೆ. ಇವುಗಳು ಸಮರ್ಪಕವಾಗಿ ನಡೆದಲ್ಲಿ ಮಕ್ಕಳಲ್ಲಿ ಹೊಸದನ್ನು ತಿಳಿದುಕೊಳ್ಳುವ, ತಮ್ಮ ಹಿತ ಕುರಿತು ಆಲೋಚಿಸುವ ಮತ್ತು ಪ್ರಶ್ನಿಸುವ ಮನೋಭಾವ ರೂಪುಗೊಳ್ಳುವುದು ಖಚಿತ.

'ಮಕ್ಕಳ ಹಕ್ಕುಗಳ ಗ್ರಾಮ ಸಭೆಗಳು ನಾಡಿನ ಎಲ್ಲೆಡೆ ವ್ಯವಸ್ಥಿತವಾಗಿ ನಡೆಯುವಂತೆ ಗ್ರಾಮೀಣ ಪ್ರದೇಶಗಳಲ್ಲಿನ ಸಂಘ–ಸಂಸ್ಥೆಗಳು, ಯುವಕ–ಯುವತಿ ಮಂಡಳಿಗಳು ನೋಡಿಕೊಳ್ಳಬೇಕು; ಸ್ಥಳೀಯ ಪಂಚಾಯತ್ ಅಧಿಕಾರಿಗಳ ಜೊತೆಗೆ ಈ ಕುರಿತು ಚರ್ಚೆ ನಡೆಸಬೇಕು. ಮಕ್ಕಳು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಅರ್ಥಮಾಡಿಕೊಳ್ಳಲು ಮತ್ತು ಗ್ರಾಮ ಮಟ್ಟದಲ್ಲಿ ಪಾಲ್ಗೊಳ್ಳುವಿಕೆ ಪ್ರಕ್ರಿಯೆಯಲ್ಲಿ ಖುದ್ದು ಭಾಗಿಯಾಗಲು ಅವರಿಗೆ ಸೂಕ್ತ ಮಾರ್ಗದರ್ಶನ ನೀಡಬೇಕಿದೆ. ಈ ಮೂಲಕ ಗಾಂಧೀ ಪ್ರಣೀತ 'ಗ್ರಾಮ ಸ್ವರಾಜ್ಯ' ಸ್ಥಾಪನೆ ನಿಟ್ಟಿನಲ್ಲಿ ಒಂದು ಹೆಜ್ಜೆ ಇಡಲು ಸಾಧ್ಯವಿದೆ.

ಒಂದು ಪತ್ರ

ಮಾನ್ಯರೆ

ಆಕಸ್ಮಿಕವಾಗಿ ಬಂಧುವೊಬ್ಬರ ಮನೆಯಲ್ಲಿ 'ಬಾಪೂ ಪ್ರಪಂಚ' ಪತ್ರಿಕೆಯನ್ನು ಕಂಡೆ. ಗಾಂಧೀಜಿಯವರನ್ನು ಸುತ್ತುವರೆದ ಮಕ್ಕಳ ಮುಖಪುಟವು ಆಕರ್ಷಣೀಯವೆನಿಸಿತು. ಪತ್ರಿಕೆಯ ಒಳಪುಟಗಳನ್ನು ತಿರುವುತ್ತಾ ಹೋದಂತೆ, ಅಲ್ಲಿನ ಅನೇಕ ಲೇಖನಗಳು ನನ್ನನ್ನು ಸೆಳೆದುಕೊಂಡವು. ಪ್ರತಿಯೊಂದೂ ಉತ್ತಮ ವಿಷಯಗಳನ್ನು ಕುರಿತದ್ದಾಗಿದ್ದವು. ಪತ್ರಿಕೆಯ ಬಾಹ್ಯ ಸೌಂದರ್ಯದಷ್ಟೇ ವಿಷಯ ವಸ್ತುಗಳ ಅಪೂರ್ವ ಸೌಂದರ್ಯವೂ ಹೃದಯವನ್ನು ಕಲಕಿತು.

ಈ ಪತ್ರಿಕೆಯನ್ನು ಈ ಮೊದಲು ನಾನು ನೋಡಿರಲಿಲ್ಲ. ಇಷ್ಟರಲ್ಲೇ ಗಾಂಧೀಭವನಕ್ಕೆ ಭೇಟಿ ನೀಡಲು ಬಯಸಿರುವೆ.

ಪ್ರೊ॥ ಸಿ.ಬಿ.ನಾಗರಾಜ್
ಬಿ.ಎಂ.ಎಸ್.ಸಿ.ಇ., ಬೆಂಗಳೂರು

ರಾಷ್ಟ್ರಪಿತ ಮಹಾತ್ಮಾ ಗಾಂಧಿ ಮತ್ತು ಕಸ್ತೂರಬಾಗಾಂಧಿ ಅವರ 150ನೇ ಜನ್ಮವರ್ಷಾಚರಣೆ



ವರ್ಷಾಚರಣೆಗೆ ಉದ್ದೇಶಿಸಿರುವ ಕಾರ್ಯಕ್ರಮಗಳು

1. ಬಾಪು-ಬಾ ಅವರ ಅನುಯಾಯಿಗಳು, ಸ್ವಾತಂತ್ರ್ಯ ಹೋರಾಟಗಾರರು, ಸಾಹಿತಿಗಳು ಹಾಗೂ ಸಮಾಜಮುಖಿ ಚಿಂತಕರನ್ನು ಒಳಗೊಂಡ ಉನ್ನತ ಮಟ್ಟದ ಸಮಿತಿ ರಚಿಸುವುದು.

2. ಆಚರಣೆಯನ್ನು ಒಂದು ವರ್ಷ ಅರ್ಥಪೂರ್ಣವಾಗಿ ರಾಜ್ಯಾದ್ಯಂತ ಆಚರಿಸುವುದು. ಉದ್ಘಾಟನೆಯನ್ನು 2 ಅಕ್ಟೋಬರ್ 2018ರಂದು ನೆರವೇರಿಸಿ, ಸಮಾರೋಪ ಕಾರ್ಯಕ್ರಮವನ್ನು 2 ಅಕ್ಟೋಬರ್ 2019ರಂದು ನಡೆಸುವುದು.

3. ಕಾರ್ಯಕ್ರಮಗಳ ವಿವರಗಳನ್ನು ಒಳಗೊಂಡ ಕಿರು ಹೊತ್ತಿಗೆ ಬಿಡುಗಡೆ ಮಾಡುವುದು.

4. ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರು ಸದಸ್ಯ ಕಾರ್ಯದರ್ಶಿಯಾಗಿರುವ ಪ್ರಧಾನ ಸಮಿತಿಯನ್ನು ರಚಿಸುವುದು.

5. ವರ್ಷಾಚರಣೆಗಾಗಿ ಈ ಕೆಳಗಿನ ಉಪ ಸಮಿತಿಗಳನ್ನು ರಚಿಸುವುದು.

(ಎ) ಕಾರ್ಯಕ್ರಮಗಳ ಸಮಿತಿ (ಬಿ) ಪುಸ್ತಕ ಪ್ರಕಟಣಾ ಸಮಿತಿ (ಸಿ) ಸ್ಮರಣ ಸಂಚಿಕೆ ಸಮಿತಿ (ಡಿ) ಹಣಕಾಸು ಸಮಿತಿ (ಇ) ಸಾಂಸ್ಕೃತಿಕ ಕಾರ್ಯಕ್ರಮಗಳ ಸಮಿತಿ (ಎಫ್) ಪ್ರಚಾರ ಸಮಿತಿ (ಜಿ) ಬಾಪು-ಬಾ ತತ್ವ ಪ್ರಣೀತ ಶಿಬಿರ ನಿರ್ವಹಣೆ ಸಮಿತಿ (ಎಚ್) ಸಂಚಾರಿ ಮ್ಯೂಜಿಯಂ ಸಮಿತಿ

6. ರಾಜ್ಯದ ಎಲ್ಲಾ ಶಿಕ್ಷಣ ಸಂಸ್ಥೆಗಳ ಪಠ್ಯ ಕ್ರಮದಲ್ಲಿ ಗಾಂಧಿ ವ್ಯಕ್ತಿ ವಿಚಾರಗಳನ್ನು ಸೇರ್ಪಡೆ ಮಾಡುವಂತೆ ಆದೇಶ ಹೊರಡಿಸುವುದು.

7. ಬಾಪು-ಬಾ ಕುರಿತು 150 ಪುಸ್ತಕಗಳನ್ನು ಪ್ರಕಟಿಸಲು ರೂ. ಒಂದು ಕೋಟಿ ಆರ್ಥಿಕ ನೆರವು ಒದಗಿಸುವುದು.

8. ಗಾಂಧೀಜಿಯವರಿಂದ ಸ್ಥಾಪಿತವಾದ ನವಜೀವನ್ ಪ್ರಕಾಶನ (ಅಹಮದಾಬಾದ್) ಗಾಂಧೀಜಿ ಆತ್ಮಕಥೆಯ ಪ್ರತಿಗಳನ್ನು ತಲಾ ಕೇವಲ ರೂ.40/-ಕ್ಕೆ ಮುದ್ರಿಸಿ ನೀಡಲು ಒಪ್ಪಿದೆ. ಇವರಿಂದ ಎರಡು ಲಕ್ಷ ಪುಸ್ತಕಗಳನ್ನು ಪಡೆದುಕೊಂಡು ರಾಜ್ಯದ ವಿದ್ಯಾರ್ಥಿ ಮತ್ತು ಯುವಜನರಿಗೆ ನೀಡುವುದು.

9. ವರ್ಷಾಚರಣೆ ಪ್ರಯುಕ್ತ ಸ್ಮರಣ ಸಂಚಿಕೆ ತರುವುದು.

10. ಬಾಪು-ಬಾ ಅವರ ತತ್ವಗಳನ್ನು ತಿಳಿಸುವ ಶಿಬಿರಗಳನ್ನು ವಿದ್ಯಾರ್ಥಿಗಳಿಗಾಗಿ ಎಲ್ಲ ಜಿಲ್ಲೆಗಳಲ್ಲಿ (ರಾಷ್ಟ್ರೀಯ ಸೇವಾ ಯೋಜನೆ ಸಹಕಾರದೊಂದಿಗೆ) ಏರ್ಪಾಟು ಮಾಡುವುದು.

ಈ ಶಿಬಿರಗಳನ್ನು ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಏರ್ಪಡಿಸುವುದು.

11. ಬಾಪು-ಬಾ ಅವರ ವಿಚಾರವನ್ನು ತಿಳಿಸಲು ಜನಪ್ರತಿನಿಧಿಗಳಿಗೆ, ಸರ್ಕಾರಿ ಅಧಿಕಾರಿ-ನೌಕರರಿಗೆ/ಕೃಷಿಕರಿಗೆ/ಜನಸಾಮಾನ್ಯರಿಗೆ ಶಿಬಿರಗಳನ್ನು ಏರ್ಪಡಿಸುವುದು

12. ಬಾಪು-ಬಾ ಅವರ ಜೀವನ ಮತ್ತು ವಿಚಾರ ತಿಳಿಸುವ ಛಾಯಾಚಿತ್ರಗಳನ್ನು ಮ್ಯೂಜಿಯಂ ರೂಪದಲ್ಲಿ 3-4 ಬೋಗಿಗಳಲ್ಲಿ ಅಳವಡಿಸಿ, ಇದನ್ನು ರೇಲ್ವೆ ಇಲಾಖೆ ನೆರವಿನೊಂದಿಗೆ ರಾಜ್ಯದ 150 ರೈಲು ನಿಲ್ದಾಣಗಳಲ್ಲಿ ತಲಾ 2 ದಿನ ನಿಲ್ಲಿಸಿ, ಅಲ್ಲಲ್ಲಿನ ಜನರಿಗೆ ಇವುಗಳನ್ನು ನೋಡುವ ಅವಕಾಶ ಒದಗಿಸುವುದು.

13. ಬಾಪು-ಬಾ ಅವರ ಸ್ಮರಣಾರ್ಥ ಅಂಚೆ ಇಲಾಖೆಯಿಂದ ವಿಶೇಷ ಸ್ಟ್ಯಾಂಪ್ ಪ್ರಕಟಿಸಲು ಕೋರಿ, ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುವುದು.

14. ಕರ್ನಾಟಕ ಸರ್ಕಾರ 5ಲಕ್ಷ ರೂ.ಗಳ ಗಾಂಧಿ ಶಾಂತಿ ಪ್ರಶಸ್ತಿ ನೀಡುತ್ತಿದೆ; ಇದೇ ಮಾದರಿಯಲ್ಲಿ ಕಸ್ತೂರಬಾ ಹೆಸರಿನಲ್ಲಿ ಮಹಿಳೆ ಮತ್ತು ಮಕ್ಕಳ ಬದುಕನ್ನು ಉತ್ತಮಪಡಿಸಲು ಶ್ರಮಿಸಿದವರಿಗೆ 5ಲಕ್ಷ ರೂ.ಗಳ ಪ್ರಶಸ್ತಿಯನ್ನು ಸ್ಥಾಪಿಸುವುದು.


15. ಆಕಾಶವಾಣಿ ಮತ್ತು ದೂರದರ್ಶನದ ಮೂಲಕ ಬಾಪು-ಬಾ ಅವರ ವಿಚಾರಗಳನ್ನು ಪ್ರಚಾರ ಮಾಡುವುದು ಹಾಗೂ ಬಾಪು-ಬಾ ಅವರ ಜೀವನದ ಬಗ್ಗೆ ಕಿರುಚಿತ್ರ ತಯಾರು ಮಾಡಲು ಪ್ರಸಾರ ಭಾರತಿ ಇಲಾಖೆಯನ್ನು ಕೋರುವುದು.

16. ಬಾಪು-ಬಾ ಸಂಬಂಧವಾಗಿ ನಾಟಕ, ಕಿರು ನಾಟಕ, ಬೀದಿ ನಾಟಕ, ಸಾಂಸ್ಕೃತಿಕ ಗಾಯನ ಕಾರ್ಯಕ್ರಮ ಹಮ್ಮಿಕೊಳ್ಳುವುದು. ಇದಕ್ಕಾಗಿ ಒಂದು ಸಾಂಸ್ಕೃತಿಕ ತಂಡವನ್ನು ರಚಿಸುವುದು.

17. ಬಾಪು-ಬಾ ಜೀವನ ಬಿಂಬಿಸುವ ಛಾಯಾಚಿತ್ರಗಳನ್ನು ವೀಕ್ಷಿಸಲು ಎಲ್ಲಾ ಜಿಲ್ಲೆ-ತಾಲ್ಲೂಕುಗಳ ಜನರಿಗೆ ಅವಕಾಶವಾಗುವಂತೆ ನಾಲ್ಕು ಸಂಚಾರಿ ವಾಹನಗಳನ್ನು ಸಿದ್ಧಪಡಿಸಿ, ಅವುಗಳು ರಾಜ್ಯದ ಪ್ರತಿ ಕಂದಾಯ ವಿಭಾಗದಲ್ಲಿ ಸಂಚರಿಸಲು ಅವಕಾಶ ಒದಗಿಸುವುದು.

18. ಶಿಕ್ಷಕರ ದಿನಾಚಾರಣೆಗೆ ಸ್ಟಾಂಪ್ ಮುದ್ರಿಸಿ ಬಿಡುಗಡೆ ಮಾಡಿ ಹಣ ಸಂಗ್ರಹಿಸುವಂತೆ 10 ರೂ.ಗಳ ಸ್ಟಾಂಪ್ ಮುದ್ರಿಸಿ ಜನ ಸಾಮಾನ್ಯರಿಂದ ಸರ್ಕಾರ ನಿಧಿ ಸಂಗ್ರಹಿಸುವುದು.

ವಸ್ತುನಿಷ್ಠತೆ ಮೆರೆಯೋಣ



ಎಂ.ಎಸ್.ರಘುನಾಥ್

(ಸೌಜನ್ಯ: 'ಪ್ರಜಾವಾಣಿ' ದಿನಪತ್ರಿಕೆ 21-9-2017)

ವ್ಯಕ್ತಿ ನಿಂದನೆ ಮಾಡದೆಯೂ ಗಾಂಧಿ ಚಿಂತನೆಗಳ ಪುನರ್ ವ್ಯಾಖ್ಯಾನ ಮಾಡಲು ಸಾಧ್ಯವಿದೆ. ನಕಾರಾತ್ಮಕ ದೃಷ್ಟಿಯ ಬರವಣಿಗೆ ಮುಂದುವರೆದರೆ ಯುವಜನರನ್ನು ಹಾದಿ ತಪ್ಪಿಸಿದಂತಾಗುತ್ತದೆ.

ಮಹಾತ್ಮಾ ಗಾಂದಿ ಹಾಗೂ ಗಾಂಧೀವಾದ ಅತಿಹೆಚ್ಚು ಅವಗಣನೆಗೆ ಗುರಿಯಾಗುತ್ತಿರುವುದು ಸಾಮಾನ್ಯ ಸಂಗತಿಯಾಗಿದೆ. ಅವು ಇದ್ದರೆ, ಪಠ್ಯಪುಸ್ತಕಗಳಲ್ಲಿ ಮಾತ್ರ ಎನ್ನುವಷ್ಟು ದುರ್ಲಭವಾಗಿವೆ. ಅದಕ್ಕೆ ನಾವು ಕಾಲ, ರಾಜಕೀಯ, ನಂಬಿಕೆಗಳು.. ..ಹೀಗೆ ಯಾವುದರ ಮೇಲೆ ಬೇಕಾದರೂ ಆರೋಪ ಮಾಡಬಹುದು.

ಆದರೆ, ಗಾಂಧೀವಾದದ ಬಗ್ಗೆ ಬುದ್ಧಿಜೀವಿಗಳು, ಚಿಂತಕರು ಪುನರ್ ಮೌಲ್ಯಮಾಪನ ಮಾಡುವುದು, ಚರ್ಚಿಸುವುದು ನಡೆಯುತ್ತಲೇ ಇದೆ. ಭಾರತದ ಎಲ್ಲಾ ಭಾಷೆಗಳಲ್ಲೂ ಗಾಂಧೀಜಿ ವಿಚಾರಗಳ ಪುನರ್ ವ್ಯಾಖ್ಯಾನ, ಅರ್ಥೈಸುವಿಕೆ, ಗಾಂಧೀಜಿಯ ಜೀವನವನ್ನು ಕುರಿತ ಸಾಹಿತ್ಯ ಕೃತಿ ವಿಮರ್ಶೆ ಇತ್ಯಾದಿಗಳೂ ರಚನೆಯಾಗುತ್ತಿವೆ. ಗಾಂಧೀಜಿ ಎಲ್ಲಾ ಕಾಲಕ್ಕೂ ಸಲ್ಲುವ ವ್ಯಕ್ತಿಯೆಂದು ಪರಿಗಣಿಸಿರುವುದರಿಂದ, ಅವರ ವಿಚಾರಗಳ ವಿಶ್ವವ್ಯಾಪಕತೆ, ಅದರಲ್ಲೂ ನಮ್ಮ ದೇಶದ ಇಂದಿನ ಪರಿಸ್ಥಿತಿಗೆ ಗಾಂಧಿ ಹಾಗೂ ಗಾಂಧೀ ವಿಚಾರಗಳ ಅವಶ್ಯಕತೆ ಹಾಗೂ ಅನಿವಾರ್ಯತೆಗಳ ಬಗ್ಗೆ ಚರ್ಚೆ, ಮಾತು ಮತ್ತು ಬರಹ ಎಲ್ಲವೂ ನಡೆಯುತ್ತಲೇ ಇದೆ. ಇಂದಿನ ಪೀಳಿಗೆಗೆ ಗಾಂಧಿಯವರನ್ನು ಪ್ರಸ್ತುತಪಡಿಸುವುದರ ಬಗ್ಗೆ ಅಲ್ಲಲ್ಲಿ ಗೊಂದಲಗಳಿದ್ದರೂ, ಪ್ರಯತ್ನಗಳು ಮುಂದುವರೆಯುತ್ತಲೇ ಇವೆ. ಅವರ ವಿಚಾರಗಳು ನಮ್ಮ ಇಂದಿನ ಸಾಮಾಜಿಕ ಹಾಗೂ ಆರ್ಥಿಕ ಸಂದರ್ಭಗಳಲ್ಲಿ ಹೆಚ್ಚು ಮಹತ್ವ ಪಡೆಯುತ್ತಿವೆ.

ಇಷ್ಟಾದರೂ, ಗಾಂಧೀಯವರನ್ನು ಪುನರ್ ಮೌಲ್ಯಮಾಪನಕ್ಕೆ ಒಳಪಡಿಸುವ ಸಂದರ್ಭದಲ್ಲಿ ಕೆಲವು ಲೇಖಕರು, ಬುದ್ಧಿಜೀವಿಗಳು ಅವರ ಬಗ್ಗೆ ನಕಾರಾತ್ಮಕ ದೃಷ್ಟಿ ತಾಳಿ ಬರೆಯುತ್ತಿರುವುದರಿಂದ, ಮೊದಲೇ ಅವರ ಬಗ್ಗೆ ತೀವ್ರ ನಿರ್ಲಕ್ಷ್ಯ ತೋರುತ್ತಿರುವ ಇಂದಿನ ಪೀಳಿಗೆಯನ್ನು, ಇನ್ನಷ್ಟು ದಿಕ್ಕು ತಪ್ಪಿಸುವಂತಾಗುತ್ತಿದೆ, ಅವರ ಬಗ್ಗೆ ತಪ್ಪು ಸಂದೇಶವೂ ರವಾನೆಯಾಗುತ್ತಿದೆ.

ಗಾಂಧಿಯವರನ್ನು ಮತ್ತೊಬ್ಬರೊಂದಿಗೆ ಅದರಲ್ಲೂ ಡಾ॥ ಅಂಬೇಡ್ಕರ್ ಅವರೊಂದಿಗೆ ಹೋಲಿಸುವ ಸಂದರ್ಭದಲ್ಲಿ ಗಾಂದಿಯವರನ್ನು ಜರೆಯುವ ಅಥವಾ ಅವರ ಹಿರಿಮೆಯನ್ನು ಕುಂಠಿತಗೊಳಿಸುವ ಪ್ರಯತ್ನಗಳೇ ಹೆಚ್ಚು.

ಈ ಮಾತನ್ನು ಹೇಳಲು ಕಾರಣ, ಇತ್ತೀಚೆಗೆ ಕನ್ನಡ ಲೇಖಕ ಕುಂ.ವೀರಭದ್ರಪ್ಪ ಅವರು ಕಾಲೇಜು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತ, 'ಮಾನಸಿಕವಾಗಿ ಗಾಂಧೀಜಿ ಶ್ರೀಮಂತ ಸೂಟುಧಾರಿ' (ಪ್ರಜಾವಾಣಿ 10-9-2017) ಎಂದು ಹೇಳಿರುವುದು. ಅಂಬೇಡ್ಕರ್ ಅವರೊಂದಿಗೆ ಹೋಲಿಸುತ್ತ, 'ಅಂಬೇಡ್ಕರ್ ಅವರು ಸೂಟು ಧರಿಸಿದ್ದರೂ, ಮಾನಸಿಕವಾಗಿ ಬಡವರ, ದೀನ-ದಲಿತರ ಹಾಗೂ ಹಿಂದುಳಿದವರ ಬಗ್ಗೆ ಚಿಂತನೆ ನಡೆಸಿದ್ದರು' ಎಂದು ಅವರು ಹೇಳಿರುವುದು

ಕೈ ಉತ್ಪನ್ನ – ಜಿಎಸ್‌ಟಿ ತೆರಿಗೆ

ರಾಜ್ಯಾದ್ಯಂತ ವ್ಯಾಪಕ ವಿರೋಧ

ಬ್ರಿಟಿಷ್ ಆಡಳಿತದಲ್ಲೂ ಕೈ ಉತ್ಪನ್ನಗಳ ಮೇಲೆ ತೆರಿಗೆ ಇರಲಿಲ್ಲ. ಸ್ವತಂತ್ರ ಭಾರತದಲ್ಲಿ ಇಷ್ಟು ವರ್ಷ ಎಂದೂ ತೆರಿಗೆ ಇರಲಿಲ್ಲ. ಆದರೆ, ಕೇಂದ್ರ ಸರ್ಕಾರ 2017ರಲ್ಲಿ ಕೈ ಉತ್ಪನ್ನಗಳ ಮೇಲೆ ಜಿಎಸ್‌ಟಿ ತೆರಿಗೆ ಹೇರಿತು.

ಇದನ್ನು ದೇಶಾದ್ಯಂತ ಗಾಂಧಿವಾದಿಗಳು ಖಂಡಿಸಿದ್ದಾರೆ.. ಕೈ ಉತ್ಪನ್ನಗಳ ಪರವಾಗಿ ಅನೇಕರು ಧ್ವನಿ ಎತ್ತಿದ್ದಾರೆ.

ಹಿಂದೆ ಬ್ರಿಟಿಷರು ಉಪ್ಪಿನ ಮೇಲೆ ತೆರಿಗೆ ಹೇರಿದಾಗ, ಗಾಂಧೀಜಿ ನೇತೃತ್ವದಲ್ಲಿ ದಂಡೀ ಯಾತ್ರೆ ನಡೆದಿತ್ತು.

ಈಗ ಕೇಂದ್ರ ಸರ್ಕಾರ ಕೈ ಉತ್ಪನ್ನಗಳ ಮೇಲೆ ತೆರಿಗೆ ಹೇರುವ ಮೂಲಕ, ತಾನು ಗಾಂಧೀಜಿ ತತ್ವಗಳಿಗೆ ವಿರುದ್ಧವಾಗಿರುವುದನ್ನು ಸಿದ್ಧಪಡಿಸಿದಂತೆ ಆಗಿದೆ.

ಹಿರಿಯ ರಂಗಕರ್ಮಿ ಮತ್ತು ಲೇಖಕ ಪ್ರಸನ್ನ ಅವರು ತೆರಿಗೆ ವಿರುದ್ಧ ನಡೆದಿರುವ ಆಂದೋಲನದ ನೇತೃತ್ವ ವಹಿಸಿದ್ದಾರೆ. ಗ್ರಾಮ ಸೇವಾ ಸಂಘವು ರಾಜ್ಯದ ಅನೇಕ ಕಡೆ ಸತ್ಯಾಗ್ರಹ ನಡೆಸಿದೆ.

ಭಾರತವು ಕೈ ಉತ್ಪನ್ನಗಳಿಗೆ ಹೆಸರುವಾಸಿ. ಇಲ್ಲಿ ಲಕ್ಷ ಲಕ್ಷ ಜನರಿಗೆ ಉದ್ಯೋಗ ದೊರಕಿರುವ ಈ ಕ್ಷೇತ್ರವನ್ನು ಜಿಎಸ್‌ಟಿ ವ್ಯಾಪ್ತಿಗೆ ತರುವುದರಿಂದ ಸರ್ಕಾರವು ಮಿಲ್ ಮಾಲೀಕರನ್ನು ಬೆಂಬಲಿಸುವ ದಾರಿ ಹಿಡಿದಂತಾಗಿದೆ.

ಬೆಂಗಳೂರಿನಲ್ಲಿ ಪ್ರಸನ್ನ ಅವರು ಉಪವಾಸ ಸತ್ಯಾಗ್ರಹ ಕೈಗೊಂಡರು. ಅವರಿಗೆ ನಾಡಿನ ಅನೇಕ ವಿಚಾರವಂತರು, ಸ್ವಾಮೀಜಿಗಳು, ರಾಜಕೀಯ ಧುರೀಣರು ಬೆಂಬಲ ನೀಡಿದ್ದಾರೆ. ಇದಕ್ಕೆ ಎಲ್ಲರ ಬೆಂಬಲ ಬೇಕಿದೆ.

ವರದಿಯಾಗಿದೆ. ಬಡವರ, ದೀನ–ದಲಿತರ ಹಾಗೂ ಹಿಂದುಳಿದವರ ಪರವಾದ ಕಾಳಜಿ ಗಾಂಧಿಯವರಲ್ಲಿ ಇರಲಿಲ್ಲವೆ? ಸ್ವಾತಂತ್ರ್ಯದೊಂದಿಗೆ ಸಮಾನತೆಗಾಗಿ ತಾನೆ ಅವರ ಹೋರಾಟ ಮುಡಿಪಾಗಿದ್ದುದು? ಕಣ್ಣಿಗೆ ರಾಚುವ ಬಡತನದ ವಿರುದ್ಧವೂ ಅವರು ಸಮರ ಸಾರಿರಲಿಲ್ಲವೆ? 'ಬಡತನ ಹೋಗಲಾಡಿಸಬೇಕಾದರೆ, ಮೊದಲು ಹಳ್ಳಿಗಳ ಉದ್ಧಾರವಾಗಬೇಕು' ಎನ್ನುವುದು ಅವರ ಧ್ಯೇಯ ಆಗಿರಲಿಲ್ಲವೆ? ಈ ನಿಟ್ಟಿನಲ್ಲಿ ದೊಡ್ಡ ಕೈಗಾರಿಕೆಗಳ ಬದಲು, ಅವರು ಗ್ರಾಮೀಣ ಹಾಗೂ ಗುಡಿ ಕೈಗಾರಿಕೆಗಳ ಪರ ಮಾತನಾಡಲಿಲ್ಲವೆ? ಗಾಂಧಿಯವರಿಗೆ ಚಿಂತನೆಗಿಂತ ಅನುಷ್ಠಾನ ಹೆಚ್ಚು ನಂಬಿಕೆ ಇರಲಿಲ್ಲವೆ?

ಇನ್ನು, ಅವರ ಉಡುಪಿನ ವಿಚಾರ ಇಲ್ಲಿ ಪ್ರಸ್ತುತವೇ ಅಲ್ಲ. ಆದರೂ, ಕುಂ. ವೀ. ಅವರು ಹೇಳಿರುವಂತೆ ಮಾನಸಿಕವಾಗಿ ಗಾಂಧಿಯವರು ಸೂಟುಧಾರಿಯಾಗಿದ್ದರು. ಜೀವನಪೂರ್ತಿ ಅರೆಬೆತ್ತಲೆಯಾಗಿಯೇ ಇದ್ದುದು–ಅದೂ ಚಾರಿತ್ರಿಕವಾದುದೇ– ಭಾರತದ ಬಡತನದ ಪ್ರತೀಕವೆಂದೇ ಬಿಂಬಿತವಾಗಲಿಲ್ಲವೆ? ಗಾಂಧಿಯವರ ಹೋರಾಟ ಬಹುಮುಖಿಯಾಗಿತ್ತು. ಆದರೆ, ಅವರ ವಿಚಾರ, ಕಾಳಜಿ ಯಾರನ್ನು ಕೇಂದ್ರೀಕರಿಸಿದ್ದವು ಎನ್ನುವುದು ಲೇಖಕರಿಗೆ, ಬುದ್ಧಿಜೀವಿಗಳಿಗೆ ತಿಳಿಯದ ವಿಚಾರವೆ? 'ಪುನರ್‌ಜನ್ಮ ಎನ್ನುವುದು ಇದ್ದರೆ, ಈ ದೇಶದಲ್ಲೇ ದಲಿತನಾಗಿ ಹುಟ್ಟಬೇಕೆಂಬುದು ನನ್ನ ಮನದಾಸೆ' ಎಂದು ಗಾಂಧಿ ಘೋಷಿಸಿರಲಿಲ್ಲವೆ?

'ಶ್ರೀಮಂತ ಸೂಟುಧಾರಿ' ಎನ್ನುವುದು ರೂಪಕದಂತೆ ಬಳಕೆಯಾದಂತೆ ಕಂಡರೂ, ಆಂತರ್ಯದಲ್ಲಿ ಅದು ನಕಾರಾತ್ಮಕ ಧೋರಣೆಯನ್ನೇ ಎತ್ತಿ ಹಿಡಿಯುತ್ತದೆ. ತೇಜೋವಧೆ ಮಾಡುವುದರಲ್ಲಿ ನಾವು ನಿಸ್ಸೀಮರು. ಕೆಲವು ಪತ್ರಿಕೆಗಳು, ಟ್ಯಾಬ್ಲಾಯ್ಡ್‌ಗಳು ಈ ಕಾರ್ಯದಲ್ಲೇ ಸದಾ ನಿರತವಾಗಿವೆ. ಆದರೆ, ಅವು ಉತ್ತೇಜಕ ಪ್ರತಿಕ್ರಿಯೆಯನ್ನು ಒದಗಿಸುವ ಬದಲು ನಕಾರಾತ್ಮಕ ಧೋರಣೆಯನ್ನೇ ಉಂಟು ಮಾಡುತ್ತವೆ.

ಹೀಗೆ ಕೆಲವು ಲೇಖಕರು, ಬುದ್ಧಿಜೀವಿಗಳು ಗಾಂಧೀ ಹಾಗೂ ಗಾಂಧೀವಾದವನ್ನು ಅಪಹಾಸ್ಯ ಮಾಡುತ್ತಿರುವುದರಿಂದಲೇ 'ಗಾಂಧಿ ಕ್ಲಾಸು', 'ಗಾಂಧಿ ಪಾಸು' ಎಂಬಂತಹ ಗೇಲಿ ಶಬ್ದಗಳ ಬಳಕೆಗೆ ಅವಕಾಶ ಒದಗುತ್ತಿದ್ದು, ಇದು ಗಾಂಧೀಜಿ ಬಗ್ಗೆ ಅವಗಣನೆಗೆ ಇಂಬು ಕೊಡುತ್ತಿವೆ (ಅಂದ ಹಾಗೆ, ಕುಂ.ವೀ. ಅವರ ಆತ್ಮಕಥನಕ್ಕೆ 'ಗಾಂಧಿ ಕ್ಲಾಸು' ಎಂದೇ ಹೆಸರಿಡಲಾಗಿದೆ).

ಇಂತಹ ವಿಗ್ರಹ ಭಂಜಕತೆ, ನಮ್ಮ ಕೆಲವು ಟ್ಯಾಬ್ಲಾಯ್ಡ್‌ಗಳ ಪರಿಭಾಷೆಯ ಮಾದರಿಯಂತೆ ಆಗುತ್ತದೆ. ಅದು ಸಮಾಜದ ಸ್ವಾಸ್ಥ್ಯವನ್ನು ಹಾಳು ಮಾಡುತ್ತದೆ. ಇಂತಹ ಭಾಷೆಯ ಬಳಕೆ ಹಾಗೂ ವ್ಯಕ್ತಿನಿಂದನೆ ಸಮಾಜದ ಒಳಿತಿಗೆ ಮಾರಕವಾಗುತ್ತದೆ. ಅನಗತ್ಯವಾದ ವಿವಾದಗಳಿಗೆ ಎಡೆ ಮಾಡಿಕೊಡುತ್ತದೆ. ವ್ಯಕ್ತಿನಿಂದನೆ ಮಾಡದೆಯೂ, ಗಾಂಧಿಯವರ ಪುನರ್ ವ್ಯಾಖ್ಯಾನ ಮಾಡಲು ಸಾಧ್ಯವಿಲ್ಲವೆ?. ಇಂದಿನ ಯುವಜನರು ಗಾಂಧಿಯವರ ಬಗ್ಗೆ ಕ್ರಿಯಾತ್ಮಕವಾಗಿ ಚಿಂತನ–ಮಂಥನ ನಡೆಸಲು ಅನುವಾಗುವಂತೆ ನಾವು ಪ್ರೇರೇಪಿಸಲು ಸಾಧ್ಯವಿಲ್ಲವೆ? ಯಾವುದೇ ವಿಮರ್ಶೆಯಲ್ಲಿ ವಸ್ತುನಿಷ್ಠತೆಯನ್ನು ತರಲು ಪ್ರಾಮಾಣಿ ಪ್ರಯತ್ನ ಸಾಧ್ಯ ಇಲ್ಲವೆ?

ಗಾಂಧಿಯವರ ವಿಷಯದಲ್ಲಿ ವಿಗ್ರಹ ಭಂಜಕತೆ ಬೇಡ; ಸಾಧ್ಯವಾದ ಮಟ್ಟಿಗೆ ವಸ್ತುನಿಷ್ಠತೆ ಮೆರೆಯೋಣ.

■



ಎಚ್.ಎಸ್.ದೊರೆಸ್ವಾಮಿ

ನಮ್ಮ ನಡುವಣ ಶ್ರೇಷ್ಠ ಗಾಂಧೀವಾದಿ

'ನಾನೊಬ್ಬ ಸಾಮಾನ್ಯ ವ್ಯಕ್ತಿ. ಯಾವ ಸರ್ಕಾರದ ಬಳಿಯೂ, ನಾನು ನನಗಾಗಿ ಏನನ್ನೂ ಎಂದೂ ಕೇಳಿಕೊಂಡಿಲ್ಲ. ನಮ್ಮ ಜನಸಾಮಾನ್ಯರನ್ನು ಕಾಡುತ್ತಿರುವ ಬಡತನವನ್ನು ನಿರ್ಮೂಲನೆ ಮಾಡಿ ಎಂದು ಇದುವರೆಗೆ ನಾನು ಕಂಡ ಎಲ್ಲಾ ಸರ್ಕಾರಗಳನ್ನು ಕೇಳಿಕೊಳ್ಳುತ್ತಿದ್ದೇನೆ. ಬಡವರು ಇನ್ನೂ ಎಷ್ಟು ವರ್ಷ ಬಡವರಾಗಿಯೇ ಇರಬೇಕು? ಗಾಂಧೀಜಿ ಆಶಯವನ್ನು ಈಡೇರಿಸಲು ಪ್ರಾಮಾಣಿಕ ಪ್ರಯತ್ನಗಳನ್ನು ಸರ್ಕಾರಗಳು ಏಕೆ ಮಾಡುತ್ತಿಲ್ಲ?'

ಈ ಮಾತುಗಳನ್ನು ಆಡಿದವರು ಇಂದು ನಮ್ಮ ನಾಡಿನಲ್ಲಿ ಅತ್ಯಂತ ಕ್ರಿಯಾಶೀಲ ಹೋರಾಟಗಾರ ಎಂದು ಪರಿಚಿತರಾಗಿರುವ 99ರ ಉತ್ಸಾಹಿ ಎಚ್.ಎಸ್.ದೊರೆಸ್ವಾಮಿ ಅವರು. ಇಂಥ ಮಾತುಗಳನ್ನು ಅವರು ಆಡಿದ್ದು ಅಕ್ಟೋಬರ್ 2ರಂದು. ಮುಖ್ಯಮಂತ್ರಿಯವರು ರಾಜ್ಯ ಸರ್ಕಾರದ ಪರವಾಗಿ ಅವರಿಗೆ 'ಮಹಾತ್ಮಾ ಗಾಂಧೀ ಸೇವಾ ಪ್ರಶಸ್ತಿ' ಕೊಡಮಾಡಿದ ಸಂದರ್ಭದಲ್ಲಿ.

ಪ್ರಶಸ್ತಿ ನೀಡಿ ಮಾತನಾಡಿದ ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯ 'ದೊರೆಸ್ವಾಮಿ ಹಿರಿಯರು. ಅವರ ಗುರಿ ಮತ್ತು ಹೋರಾಟ ಮನೋಭಾವಕ್ಕೆ ಕಿಂಚಿತ್ತೂ ವಯಸ್ಸಾಗಿಲ್ಲ. ಅವರದು ಅದೇ ಕಂಚಿನ ಕಂಠದ ಗುಡುಗು. ನಮ್ಮ ಸರ್ಕಾರವನ್ನೂ ಅವರು ಟೀಕಿಸಿದ್ದಾರೆ. ಈಗ ಅವರು ಕೇಳಿರುವ ಪ್ರಶ್ನೆ ನಿಜಕ್ಕೂ ನಮ್ಮ ಆತ್ಮಸಾಕ್ಷಿಯನ್ನು ಕೆಣಕುವಂಥದ್ದು. ಅವರ ಟೀಕೆಯನ್ನು ಮಾರ್ಗದರ್ಶನ ಎಂದೇ ನಾನು ಭಾವಿಸುತ್ತೇನೆ' ಎಂದರು.

ದೊರೆಸ್ವಾಮಿ ಅವರು ಸರ್ಕಾರವನ್ನು ಶತೃ ಎಂದು ಭಾವಿಸಿಲ್ಲ. ಆದರೆ, ಅದರ ಮುಂದೆ ಯಾವುದೇ ಸಂದರ್ಭದಲ್ಲೂ ಮಂಡಿಯೂರಿ ಕುಳಿತುಕೊಳ್ಳಲು ಅವರು ಸಿದ್ಧರಿಲ್ಲ. ಇದುವೇ ಸಾತ್ವಿಕ ಮನಸ್ಸು. ಇದನ್ನು ಅರ್ಥ ಮಾಡಿಕೊಳ್ಳದೇ ಹೋದರೆ, ಯಾವ ರಾಜ್ಯ ಸರ್ಕಾರದ ವಿರುದ್ಧ ತಾವೇ ಎಷ್ಟೋ ಬಾರಿ ಹೋರಾಟ, ಪ್ರತಿಭಟನೆ, ಸತ್ಯಾಗ್ರಹ, ಧರಣಿ ನಡೆಸಿದ್ದಾರೊ, ಇವುಗಳನ್ನು ನಡೆಸಿದವರಿಗೆ ಪ್ರತ್ಯಕ್ಷವಾಗಿ ಬೆಂಬಲ ನೀಡಿದ್ದಾರೊ ಅಂಥ ರಾಜ್ಯ ಸರ್ಕಾರದಿಂದಲೇ ಅವರು ಏಕೆ ಪ್ರಶಸ್ತಿ ಸ್ವೀಕರಿಸಬೇಕು? ಎಂಬಂಥ ಬಾಲಿಶ ಪ್ರಶ್ನೆಯು ಕಾಡುತ್ತದೆ.

ದೊರೆಸ್ವಾಮಿ ಅವರು ಹುಟ್ಟಿದ್ದು ಬೆಂಗಳೂರಿನ ಹತ್ತಿರದ ಹಾರೋಹಳ್ಳಿಯ ಅಯ್ಯರ್ ಕುಟುಂಬದಲ್ಲಿ ಏಪ್ರಿಲ್ 10, 1918ರಂದು. ಸುಮಾರು 50 ಜನರಿದ್ದ ಕೂಡು ಕುಟುಂಬ

ಅವರದು. ಅಲ್ಲಿ 16 ಜನ ಮಕ್ಕಳಿದ್ದರು. ಪ್ರಾಥಮಿಕ ಶಿಕ್ಷಣ ಮುಗಿಸುವುದರಲ್ಲಿ ತಂದೆಯನ್ನು ಕಳೆದುಕೊಂಡ ದೊರೆಸ್ವಾಮಿ, ಅಜ್ಜನ ಆರೈಕೆಯಲ್ಲಿ ಬೆಳೆದರು. ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿಗೆ ಬಂದರು. ವಿ.ವಿ.ಪುರಂ ಶಾಲೆಯಲ್ಲಿ ಮಾಧ್ಯಮಿಕ, ಕೋಟೆ ಶಾಲೆಯಲ್ಲಿ ಪ್ರೌಢಶಿಕ್ಷಣ ಪಡೆದರು. ಆ ದಿನಗಳಲ್ಲೇ ಅವರು ಮಹಾತ್ಮಾ ಗಾಂಧೀಯವರ 'ಮೈ ಅರ್ಲೀ ಲೈಫ್' ಪುಸ್ತಕ ಓದಿ, ಪ್ರಭಾವಿತರಾಗಿ ಸ್ವಾತಂತ್ರ್ಯ ಚಳವಳಿಗೆ ಧುಮುಕಿದರು. ಹಿರಿಯರಾದ ಎ.ಜಿ.ರಾಮಚಂದ್ರರಾಯರ ಸಲಹೆಯಂತೆ ಸರ್ಕಾರಿ ಕಚೇರಿಗಳಿಗೆ ಟೈಂಬಾಂಬ್ ಇಟ್ಟರು. 14 ತಿಂಗಳ ಕಾಲ ಸೆರೆವಾಸ ಅನುಭವಿಸಿದರು. 'ಜೈಲು ನನಗೆ ಒಳ್ಳೆಯ ಪಾಠ ಕಲಿಸಿತು' ಎನ್ನುವ ದೊರೆಸ್ವಾಮಿ ಅವರು '1936ರಲ್ಲಿ ಬನಪ್ಪ ಪಾರ್ಕಿನಲ್ಲಿ ಬ್ರಿಟಿಷರ ವಿರುದ್ಧ ಕೆ.ಎಫ್.ನಾರಿಮನ್ ಅವರ ಭಾಷಣ ಇತ್ತು. ಪೊಲೀಸರು ಅವರನ್ನು ಬಂಧಿಸಿದರು. ನೆರೆದಿದ್ದ ಗುಂಪಿನತ್ತ ಲಾಠಿ ಬೀಸಿದರು. ನಾವೆಲ್ಲ ಏಟು ತಿಂದೆವು' ಎಂದು ಆ ದಿನಗಳನ್ನು ನೆನಪಿಸಿಕೊಳ್ಳುತ್ತಾರೆ.

1942ರಲ್ಲಿ ಬಿ.ಎಸ್‌ಸಿ. ಪದವಿ ಮುಗಿಸಿದಾಗ, ಗಾಂಧಿ ನಗರದ ಹೈಸ್ಕೂಲಿನಲ್ಲಿ ಅವರು ಶಿಕ್ಷಕರಾಗಿ ನೇಮಕಗೊಂಡರು. ಕೆಲವು ವರ್ಷಗಳಲ್ಲೇ ಕೆಲಸ ಬಿಟ್ಟು, ಮೈಸೂರಿಗೆ ತೆರಳಿ 'ಸಾಹಿತ್ಯ ಮಂದಿರ' ಎಂಬ ಪ್ರಕಾಶನ ಸಂಸ್ಥೆಯ ಮೂಲಕ ಪುಸ್ತಕ ಮಳಿಗೆ ತೆರೆದರು. ಜನರನ್ನು ಜಾಗೃತಗೊಳಿಸಲು ಪತ್ರಿಕೆ ಪ್ರಕಟಿಸಿದರು. ತನ್ನ ವಿರುದ್ಧ ಪ್ರಕಟಿಸುತ್ತಿದ್ದ ಕಾರಣಕ್ಕೆ ಬ್ರಿಟಿಷ್ ಸರ್ಕಾರ ಪತ್ರಿಕೆಯನ್ನು ಮುಟ್ಟುಗೋಲು ಹಾಕಿಕೊಂಡಿತು.

ಈ ದಿನಗಳಲ್ಲೇ ಅವರ ವಿವಾಹ ಲಲಿತಮ್ಮ ಅವರ ಜೊತೆಗೆ ನಡೆಯಿತು. ದೊರೆಸ್ವಾಮಿ ಅವರನ್ನು ಚೆನ್ನಾಗಿ ಅರಿತಿದ್ದ ಅವರು, ಸಂಸಾರದ ಹೊರೆಯನ್ನು ತಾವು ವಹಿಸಿಕೊಂಡು, ದೊರೆಸ್ವಾಮಿ ಅವರನ್ನು ಸಮಾಜಕ್ಕೆ ಸಮರ್ಪಿಸಿದರು. 'ಅದು ಆಕೆಯ ದೊಡ್ಡ ಗುಣ; ಆಕೆಯಿಂದಾಗಿಯೇ ನಾನು ಸಮಾಜಕ್ಕೆ ಸಂದಿದ್ದು' ಎಂದು ದೊರೆಸ್ವಾಮಿ ಅವರು ಮನ:ಪೂರ್ವಕವಾಗಿ ಸ್ಮರಿಸುತ್ತಾರೆ.

ದೊರೆಸ್ವಾಮಿ ಅವರು ಸ್ವಾತಂತ್ರ್ಯ ಬಂದ ಬಳಿಕವೂ ತಮ್ಮ ಹೋರಾಟದ ಕೆಚ್ಚನ್ನು ಕಡಿಮೆ ಮಾಡಿಕೊಳ್ಳಲಿಲ್ಲ. ಗಾಂಧೀ ಪರಿವಾರವನ್ನು ಬೆಳೆಸುತ್ತಾ, ಕಿರಿಯರಿಗೆ ಮಾರ್ಗದರ್ಶನ ನೀಡುತ್ತಾ, ಸಮಾಜಕ್ಕೆ ಎದುರಾದ ಸವಾಲುಗಳನ್ನು ಎದುರಿಸುತ್ತಾ, ಕಿರಿಯರನ್ನೂ ಪ್ರೋತ್ಸಾಹಿಸುತ್ತಾ ನಿರಂತರವಾಗಿ ಸಾಮಾಜಿಕ ಹೋರಾಟಗಳಲ್ಲಿ ತೊಡಗಿ, ತಮ್ಮ ಕಾಲದ ಆತ್ಮಸಾಕ್ಷಿಯಾಗಿ ಕಾರ್ಯ ನಿರ್ವಹಿಸುತ್ತಾ ಬಂದವರು.

ದೊರೆಸ್ವಾಮಿ ಅವರು ರಾಜಕೀಯದಲ್ಲಿ ಮುಳುಗಲಿಲ್ಲ; ರಾಜಕೀಯವು ಅಸ್ಪೃಶ್ಯ ಎಂದು ತೀರ್ಮಾನಿಸಲಿಲ್ಲ. ಅವರು ರಾಜ್ಯಶಕ್ತಿಯನ್ನು ಮಣಿಸಲು ಲೋಕಶಕ್ತಿ ಅತ್ಯವಶ್ಯ ಎಂಬುದನ್ನು ಸಮಾಜಕ್ಕೆ ಮನಗಾಣಿಸಿ ಕೊಟ್ಟರು. ಗಾಂಧೀಜಿ ನಿಧನಾನಂತರ ರಚನೆಯಾದ ಅಖಿಲ ಭಾರತ ಸರ್ವೋದಯ ಮಂಡಳ ಕಾರ್ಯಚಟುವಟಿಕೆಗಳಲ್ಲಿ ತೊಡಗಿದರು. ಆಚಾರ್ಯ ವಿನೋಬಾ ಭಾವೆ ಅವರು ಭೂದಾನ ಚಳವಳಿ ಅರಂಭಿಸಿದಾಗ, ರಾಜ್ಯದಲ್ಲಿ ಲಕ್ಷ ಲಕ್ಷ ಎಕರೆ ಭೂಮಿಯು ದಾನವಾಗಿ ದೊರಕುವಂತೆ ನೋಡಿಕೊಂಡರು. ವಾರ್ಧಾದ ಸರ್ವ ಸೇವಾ ಸಂಘ ಹಮ್ಮಿಕೊಂಡ ಕಾರ್ಯಗಳು ರಾಜ್ಯದಲ್ಲಿ ಯಶಸ್ವಿಯಾಗಿ ನಡೆಯುವುದರ ಜವಾಬ್ದಾರಿ ನಿರ್ವಹಿಸಿದರು. ರಾಜ್ಯದಲ್ಲಿ ಸರ್ವೋದಯ ಆಂದೋಲನ ರೂಪುಗೊಳ್ಳುವುದನ್ನು ಉತ್ತೇಜಿಸಿದರು. ಜಯಪ್ರಕಾಶ ನಾರಾಯಣರು 1974ರ ಹೊತ್ತಿಗೆ

ಗಾಂಧೀ ಜಯಂತಿ
ಮತ್ತು ಅಹಿಂಸಾ ದಿನಾಚರಣೆ


ಗಾಂಧಿ ಜಯಂತಿಯನ್ನು ಅಕ್ಟೋಬರ್ 2ರಂದು ಗಾಂಧೀ ಸ್ಮಾರಕ ನಿಧಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ಸರ್ಕಾರದ ರಾ.ಸೇ.ಯೋ, ಶೇಷಾದ್ರಿಪುರಂ ಶಿಕ್ಷಣ ದತ್ತಿ, ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಇವರ ಸಂಯುಕ್ತ ಆಶ್ರಯದಲ್ಲಿ ನಡೆಸಲಾಯಿತು.

ಆನಂದರಾವ್ ವೃತ್ತದ ಗಾಂಧೀ ಪ್ರತಿಮೆಯಿಂದ ಗಾಂಧೀ ಭವನದವರೆಗೆ ವಿದ್ಯಾರ್ಥಿ–ಯುವಜನರು ಸದ್ ಭಾವನಾ ಪಾದಯಾತ್ರೆಯಲ್ಲಿ ಪಾಲ್ಗೊಂಡರು. ಇದನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಎನ್.ಆರ್. ವಿಶುಕುಮಾರ್ ಉದ್ಘಾಟಿಸಿದರು. ಸ್ಮಾರಕ ನಿಧಿಯ ಅಧ್ಯಕ್ಷ ಡಾ॥ವೂಡೇ ಪಿ.ಕೃಷ್ಣ ಮತ್ತಿತರ ಹಿರಿಯ ಗಾಂಧಿವಾದಿಗಳು ಭಾಗವಹಿಸಿದ್ದರು. ವೇಮಗಲ್ ಸೋಮಶೇಖರ್ ಗಾಂಧಿ ವಸ್ತ್ರಧಾರಿಯಾಗಿ ಗಮನ ಸೆಳೆದರು.

ಇದೇ ಸಂದರ್ಭದಲ್ಲಿ ಜಯಶ್ರೀ ಟ್ರಸ್ಟ್ ದತ್ತಿ ಪುರಸ್ಕಾರವನ್ನು ಎಂ.ವಿ.ನಾಗರಾಜರಾವ್ ಅವರ ಕೃತಿ 'ಗಾಂಧೀ ನೂರು ನೆನಪು' ಕೃತಿಗೆ ನೀಡಿ, ಗೌರವಿಸಲಾಯಿತು. 'ಬಾಪು ಪ್ರಪಂಚ' ಮಾಸಪತ್ರಿಕೆಯ ಸಂಚಿಕೆಯನ್ನು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ 'ಜನಪದ' ಮಾಸಪತ್ರಿಕೆ ಮತ್ತು 'ಮಾರ್ಚ್ ಆಫ್ ಕರ್ನಾಟಕ' ಮಾಸಪತ್ರಿಕೆಗಳ ಗಾಂಧೀ ಸಂಚಿಕೆಗಳನ್ನು ಬಿಡುಗಡೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಹಿರಿಯ ಗಾಂಧೀವಾದಿ ಡಾ॥ಎಚ್.ಎಸ್. ದೊರೆಸ್ವಾಮಿ ಮತ್ತು ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಡಾ॥ ಪಾಟೀಲ ಪುಟ್ಟಪ್ಪ ಉಪಸ್ಥಿತರಿದ್ದರು.

'ಮಹಾತ್ಮಾ ಗಾಂಧಿ ಸೇವಾ ಪ್ರಶಸ್ತಿ' ಜೊತೆಗೆ ಕರ್ನಾಟಕ ಸರ್ಕಾರ ನೀಡಿದ ರೂ.5ಲಕ್ಷಗಳನ್ನು ದೊರೆಸ್ವಾಮಿ ಅವರು ಸ್ವೀಕರಿಸಿದರು. ಈ ಹಣವನ್ನು ಅವರು ಏನು ಮಾಡಿದರು?



ಅದು ಅದೇ ದಿನ, ಅದೇ ಸಮಾರಂಭದಲ್ಲಿ ಎಲ್ಲರಿಗೂ ತಿಳಿದು ಹೋಯಿತು. ಮುಖ್ಯಮಂತ್ರಿಯವರಿಂದ ಪ್ರಶಸ್ತಿ ಮೊತ್ತದ ಚೆಕ್ ಸ್ವೀಕರಿಸುತ್ತಲೇ, ಅವರು ತಾವೇ ಮುಂದೆ ಬಂದು 'ಇದರಲ್ಲಿ ಒಂದು ಲಕ್ಷವನ್ನು ಬಡವರಿಗೆ ಭೂಮಿಯನ್ನು ಸರ್ಕಾರದಿಂದ ಕೊಡಿಸಲು ಹೋರಾಡುತ್ತಿರುವವರಿಗೆ, ಇನ್ನೊಂದು ಲಕ್ಷವನ್ನು ಬಡವರಿಗೆ ಹೆಚ್ಚಿನ ಮಟ್ಟಿಗೆ ಚಿಕಿತ್ಸೆ ನೀಡುತ್ತಿರುವ ಜಯದೇವ ಆಸ್ಪತ್ರೆಗೆ, ಉಳಿದ ಮೂರು ಲಕ್ಷವನ್ನು 'ನನ್ನನ್ನು ಈ ವಯಸ್ಸಿನಲ್ಲೂ ಕಾಪಾಡುತ್ತಿರುವ ಪತ್ನಿ ಲಲಿತಮ್ಮನವರಿಗೆ ನೀಡುತ್ತೇನೆ' ಎಂದು ಘೋಷಿಸಿದರು.

ಇಂದಿರಾ ಗಾಂಧಿ ಅವರು ಇಟ್ಟ ಸರ್ವಾಧಿಕಾರಿ ಹೆಜ್ಜೆಗಳನ್ನು ವಿರೋಧಿಸಲು 'ನವ ನಿರ್ಮಾಣ ಆಂದೋಲನ'ವನ್ನು ದೇಶಾದ್ಯಂತ ಹಮ್ಮಿಕೊಂಡಾಗ, ಆ ಆಂದೋಲನಕ್ಕೆ ಕರ್ನಾಟಕದಲ್ಲಿ ದೊರೆಸ್ವಾಮಿ ಅವರು ಒತ್ತಾಸೆಯಾಗಿ ನಿಂತರು. 1989ರಲ್ಲಿ ಪ್ರಧಾನಿ ನರಸಿಂಹರಾವ್ ಕಾಲದಲ್ಲಿ ಜಾಗತೀಕರಣ ಪ್ರಕ್ರಿಯೆ ಪ್ರಾರಂಭವಾದಾಗ, ದೇಶದಲ್ಲಿ ರೂಪುಗೊಂಡ 'ಆಜಾದಿ ಬಚಾವೊ ಆಂದೋಲನ'ಕ್ಕೆ ರಾಜ್ಯದಲ್ಲಿ ನೇತೃತ್ವ ನೀಡಿದರು.

ನಮ್ಮ ರಾಜ್ಯದಲ್ಲಿ ತುಂಗಾಮೂಲ ಉಳಿಸಿ ಹೋರಾಟ ನಡೆದಾಗ, ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರಾರಂಭವಾದಾಗ, ಮದ್ಯನಿಷೇಧ ಚಳವಳಿ ಎಲ್ಲೇ ಆಗಲಿ ಶುರುವಾದಾಗ, ಅಸ್ಪೃಶ್ಯತೆ ವಿರುದ್ಧ ಧ್ವನಿ ಎದ್ದಾಗ, ಸಾಮಾಜಿಕ ಸಮಾನತೆಗಾಗಿ ಜನಶಕ್ತಿ ಸತ್ಯಾಗ್ರಹಕ್ಕೆ ಮುಂದಾದಾಗ ದೊರೆಸ್ವಾಮಿ ಅಲ್ಲೆಲ್ಲಾ ಹಾಜರ್ ಇದ್ದವರು. ಭೂಕಬಳಿಕೆ ಹಗರಣ ನಡೆದಾಗ, ಬೆಂಗಳೂರಿನ ಕಸವನ್ನು ಮಂಡೂರು ಇತ್ಯಾದಿ ಕಡೆ ಸುರಿದಾಗ, ಆದಿವಾಸಿಗಳು ಬದುಕುವ ಹಕ್ಕಿಗಾಗಿ ಹೋರಾಟದ ದಾರಿ ಹಿಡಿದಾಗ, ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ಬಂದಾಗ ದೊರೆಸ್ವಾಮಿ ಅವರು ಧಾವಿಸಿ ಬಂದಿದ್ದಾರೆ.


'ದೊರೆಸ್ವಾಮಿಯವರು ಗಾಂಧಿಯವರಷ್ಟೇ ಕ್ರಿಯಾಶೀಲರು' ಎಂದರೆ ಅತಿಶಯೋಕ್ತಿ ಆಗದು. ಹಾಗಾಗಿಯೇ ಅವರು 'ಕೇವಲ ಗಾಂಧೀಜಿ ವಿಷಯವನ್ನು ಬರೀ ಭಾಷಣಕ್ಕೆ ಸೀಮಿತಗೊಳಿಸ ಬೇಡೀಪ್ಪಾ, ಅನ್ಯಾಯ-ಅಕ್ರಮಗಳು ನಡೆದಾಗ ಗಾಂಧೀಜಿ ಸತ್ಯಾಗ್ರಹ, ಹೋರಾಟಗಳನ್ನು ನಡೆಸಲಿಲ್ಲವೆ? ನಾವೂ ಹಾಗೇ ಮಾಡಬೇಕಲ್ಲವೆ? ಗಾಂಧೀಜಿ ವಿಚಾರವನ್ನು ಬರೀ ಪುಸ್ತಕಗಳ ಮೂಲಕ ಹಂಚಿದರೆ ಸಾಕಾಗುವುದಿಲ್ಲ; ಗಾಂಧೀಜಿಯವರ ಹಾಗೆ ಕ್ರಿಯಾಶೀಲರಾಗುವುದಕ್ಕೆ ಯುವಜನರನ್ನು ಕರೆದು ಕೊಳ್ಳಬೇಕಾಗುತ್ತದೆ' ಎನ್ನುವುದಲ್ಲದೆ, 'ಕಿರಿಯರಿಂದಲೂ ಅನೇಕ ವಿಷಯಗಳನ್ನು ನಾವು ಕಲಿಯುವುದು ಇದೆ; ಅವರೇ ವಿಚಾರದ ಮತ್ತು ಹೋರಾಟದ ನಾಯಕತ್ವವನ್ನು ವಹಿಸಿಕೊಳ್ಳುವುದು ಉತ್ತಮ' ಎಂಬುದನ್ನೂ ಸ್ಪಷ್ಟವಾಗಿ ಸೂಚಿಸುತ್ತಾರೆ.

ದೊರೆಸ್ವಾಮಿ ಅವರು ಹಣ-ಅಧಿಕಾರ-ಪ್ರಚಾರವನ್ನು ಎಂದೂ ಬಯಸಿದವರಲ್ಲ. ಮುಂಚೂಣಿಯಲ್ಲಿ ಇರಬೇಕು ಎಂಬ ಕಿಂಚಿತ್ ಅಪೇಕ್ಷೆಯೂ ಅವರಿಗಿಲ್ಲ. ಯಾವುದೇ ರೀತಿಯ ಭೇದ-ಭಾವವನ್ನು ಅವರಲ್ಲಿ ಕಾಣುವುದಿಲ್ಲ. ಸರಳತೆ, ಪ್ರಾಮಾಣಿಕತೆಗಳನ್ನು ಅವರು ನಿರಂತರವಾಗಿ ಪಾಲಿಸಿಕೊಂಡು ಬಂದಿದ್ದಾರೆ. ಗಾಂಧೀಜಿ ವಿಚಾರವನ್ನು ಹೀಗಳೆದು ಮಾತಾಡು ವವರನ್ನೂ ಅವರು ಪ್ರೀತಿಯಿಂದಲೇ ಮಾತನಾಡಿಸುತ್ತಾರೆ. 'ಇದೆಲ್ಲವನ್ನೂ ನೀವು ಎಲ್ಲಿ ತಿಳಿದುಕೊಂಡಿರಪ್ಪಾ?' ಎಂದು ಕಕ್ಕುಲಾತಿಯಿಂದ ಕೇಳುತ್ತ, 'ನೀವು ತಿಳಿದುಕೊಂಡಿರುವುದನ್ನು ಇನ್ನೊಮ್ಮೆ ಪರಾಮರ್ಶಿಸಿ ನೋಡಿ' ಎಂದು ಸಲಹೆ ನೀಡುತ್ತಾರೆ.

ದೊರೆಸ್ವಾಮಿ ಅವರು ಅತ್ಯಂತ ಸರಳ ಬದುಕು ರೂಢಿಸಿ ಕೊಂಡಿದ್ದಾರೆ. ಮಡಿ-ಮೈಲಿಗೆ-ಪಥ್ಯ-ಕಟ್ಟುಪಾಡು ಯಾವುದನ್ನೂ ಅವರು ಇಟ್ಟುಕೊಂಡಿಲ್ಲ. ತಾವು ಸಸ್ಯಾಹಾರಿ

ಉಪ್ಪಿನ ಸತ್ಯಾಗ್ರಹದಲ್ಲಿ ಕರ್ನಾಟಕದ ಏಕಮೇವ ಪ್ರತಿನಿಧಿ

ಹುತಾತ್ಮ ಮೈಲಾರ ಮಹಾದೇವಪ್ಪ ಸ್ಮರಣಾರ್ಥ ಕಾರ್ಯಕ್ರಮ



ದೇಶದ ಸ್ವಾತಂತ್ರ್ಯಕ್ಕಾಗಿ ಬಲಿದಾನ ನೀಡಿದ ಹುತಾತ್ಮ ಮೈಲಾರ ಮಹಾದೇವಪ್ಪ ಮತ್ತು ಇತರರ ಹೋರಾಟ, ತ್ಯಾಗ ದಿಂದಾಗಿ ದೇಶವು ದಾಸ್ಯದಿಂದ ಬಿಡುಗಡೆ ಹೊಂದಿತು ಎಂದು ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಉಪಾಧ್ಯಕ್ಷ ವಿ.ಎನ್. ತಿಪ್ಪನಗೌಡ ಅವರು ಹೇಳಿದರು.

ಧಾರವಾಡ ಜಿಲ್ಲೆ ಕಲಘಟಗಿಯ ಜಿ.ಇ.ಸಂಯುಕ್ತ ಪ.ಪೂ. ಮಹಾವಿದ್ಯಾಲಯದಲ್ಲಿ ಏರ್ಪಾಟಾಗಿದ್ದ ಕಾರ್ಯ ಕ್ರಮದಲ್ಲಿ ಅವರು ಮಾತನಾಡುತ್ತಾ, 'ಮೈಲಾರ ಮಹಾದೇವಪ್ಪ ಗಾಂಧೀಜಿಯವರ ನೆರಳಿನಂತೆಯೇ ನಡೆದು, ಹುತಾತ್ಮರಾದರು. ಇಂಥವರ ಬಲಿದಾನವನ್ನು ಸ್ಮರಿಸುವುದು ನಮ್ಮ ಕರ್ತವ್ಯ; ಇಂಥ ವಿಷಯಗಳ ಬಗ್ಗೆ ವಿದ್ಯಾರ್ಥಿ-ಯುವಜನರ ಗಮನ ಸೆಳೆಯುವ ಕೆಲಸ ತುರ್ತಾಗಿ ಆಗಬೇಕಿದೆ; ದೇಶಾಭಿಮಾನ ಮೂಡಿಸಿಕೊಂಡು, ದೇಶವನ್ನು ಕಟ್ಟುವ ಕಾರ್ಯದಲ್ಲಿ ವಿದ್ಯಾರ್ಥಿ-ಯುವಜನರು ತೊಡಗಬೇಕಿದೆ ಎಂದು ತಿಳಿಸಿದರು.

'ಸ್ವಾತಂತ್ರ್ಯ ಹೋರಾಟ: ಒಂದು ನೆನಪು' ವಿಷಯದ ಬಗ್ಗೆ ಹಿರಿಯ ಸಾಹಿತಿ ಸತೀಶ ಕುಲಕರ್ಣಿ ಮಾತನಾಡಿ, ಅಂದು ಗಾಂಧೀಜಿ ದೇಶದ ಸ್ವಾತಂತ್ರ್ಯಕ್ಕಾಗಿ ಕರೆ ನೀಡಿದಾಗ, ಮೂಲೆ ಮೂಲೆಗಳಲ್ಲಿಂದ ಯುವಜನರು, ಹಿರಿಯರು, ಮಹಿಳೆಯರು, ರೈತರು ಎಲ್ಲರೂ ಭಾಗವಹಿಸಿದರು. ಸಹಸ್ರ ಸಹಸ್ರ ಜನರು ದಿನನಿತ್ಯ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಳ್ಳುತ್ತಿದ್ದರು. ಗಾಂಧೀಜಿಯವರ ಒಂದು ಮಾತು, ಇಡೀ ದೇಶದ ತುಂಬಾ ಹಬ್ಬಿ ಬಿಡುತ್ತಿತ್ತು ಎಂದು ತಿಳಿಸಿ ಹೇಳಿದರು.

ಕಾರ್ಯಕ್ರಮದಲ್ಲಿ ಗಂಜಿಗಟ್ಟಿ ಗ್ರಾಮದ 101 ವರ್ಷದ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ರಾಮಪ್ಪ ಚನ್ನಪ್ಪ ಕುಸುಗಲ್ ಅವರನ್ನು ಸನ್ಮಾನಿಸಲಾಯಿತು. ಗುಡ್ ನ್ಯೂಜ್ ಮಹಾ ವಿದ್ಯಾಲಯದ ಗ್ರಂಥಪಾಲಕ ಡಾ। ಮಹೇಶ ಹೊರಕೇರಿ ಅವರು ತಾವು 'ಮೈಲಾರ ಮಹಾದೇವರ ಜೀವನ ಆಧಾರಿತ ಚಲನಚಿತ್ರ'ದಲ್ಲಿ ಅಭಿನಯಿಸಿದಾಗ ಆದ ಅನುಭವಗಳನ್ನು ಹಂಚಿಕೊಂಡರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ। ಲಿಂಗರಾಜ ಅಂಗಡಿ, ತಾಲ್ಲೂಕು ಅಧ್ಯಕ್ಷೆ ಅನಿತಾ ಹತ್ತಿ ಮುಂತಾದವರು ಭಾಗಿಯಾಗಿದ್ದರು. ಕಾರ್ಯಕ್ರಮದ ಅಧ್ಯಕ್ಷತೆ ಯನ್ನು ಜಿ.ಇ. ಮಹಾವಿದ್ಯಾಲಯದ ಪ್ರಾಚಾರ್ಯ ಎಸ್.ಎಸ್. ಹಾವೇರಿ ವಹಿಸಿದ್ದರು.

ಆಗಿದ್ದರೂ, ಅವರು ಅದರ ಪರವಾಗಿ ವಕಾಲತ್ತು ಮಾಡು ವುದಿಲ್ಲ. ಮಾಂಸಾಹಾರಿಗಳನ್ನು ದೂರ ಇಡುವವರಲ್ಲ. 'ಆಹಾರ ಅವರವರ ಆಯ್ಕೆ' ಎನ್ನುತ್ತಾರೆ.

ದೊರೆಸ್ವಾಮಿ ಅವರು ಮಾಜಿ ಪ್ರಧಾನಿ, ಮುಖ್ಯಮಂತ್ರಿ, ಮಂತ್ರಿಗಳು ಇರುವ ಅನೇಕ ಸಭೆಗಳಲ್ಲಿ ಭಾಗವಹಿಸಿದ್ದಾರೆ. ಅಲ್ಲಿ ಸ್ಪಷ್ಟವಾಗಿ, ನಿಷ್ಠುರವಾಗಿ ಮಾತನಾಡಿದ್ದಾರೆ. ಕಿರಿಯರು ಮಾತನಾಡುವುದನ್ನೂ ಅವರು ಅನೇಕ ಸಭೆಗಳಲ್ಲಿ ಅತ್ಯಂತ ಆಸಕ್ತಿಯಿಂದ ಕೇಳಿಸಿಕೊಂಡಿದ್ದಾರೆ. ಸಮರ್ಥವಾಗಿ ಅಭಿಪ್ರಾಯ ಮಂಡಿಸಿದವರ ಬೆನ್ನು ಚಪ್ಪರಿಸಿದ್ದಾರೆ. ತಮ್ಮ ಅಭಿಪ್ರಾಯಕ್ಕಿಂತ ಭಿನ್ನ ನಿಲವನ್ನು ವ್ಯಕ್ತಪಡಿಸಿದವರೊಂದಿಗೆ ಅವರು ವಾದ, ಜಗಳಕ್ಕೆ ಇಳಿದ ಸಂದರ್ಭಗಳೇ ಇಲ್ಲ.

ಒಟ್ಟಾರೆ, ಅವರೊಂದಿಗೆ ಕೆಲವು ಗಂಟೆಗಳನ್ನಾದರೂ ಕಳೆದಿರುವ ಪ್ರತಿಯೊಬ್ಬರೂ ಜೀವನದ ಸಾರ್ಥಕತೆಯನ್ನು ಅನುಭವಿಸಿದ್ದಾರೆ, ಎನ್ನಬಹುದು.

'ದೇಶಕ್ಕೆ ಸ್ವಾತಂತ್ರ್ಯ ಬರಲಿ; ಬಡವರಿಗೆ ಮನೆ, ಉದ್ಯೋಗ, ಶಿಕ್ಷಣ, ಆರೋಗ್ಯ ಸಿಗಲಿ; ದಲಿತರಿಗೆ ಸಮಾಜದಲ್ಲಿ ಗೌರವ ದೊರಕಲಿ; ಮಹಿಳೆಯರಿಗೆ ಸಮಾನತೆ ಸಿಗಲಿ; ದು:ಖಿತರು ದು:ಖದಿಂದ ವಿಮೋಚನೆ ಪಡೆಯಲಿ.. ..' ಎಂದೆಲ್ಲಾ ಆಶಿಸುತ್ತಾ, ತಮ್ಮ ಬದುಕನ್ನೇ ಸಮಾಜಕ್ಕೆ ನೀಡಿರುವ ದೊರೆಸ್ವಾಮಿ ಅವರ ಮನಸ್ಸಿನಲ್ಲಿ ಈ 99 ವರ್ಷಗಳಲ್ಲಿ ಒಮ್ಮೆಯೂ 'ನನಗೂ ಒಂದು ಮನೆ ಇರಲಿ' ಎಂಬುದು ಮೂಡಿಲ್ಲ. ಹಾಗಾಗಿ, ಅವರು ಇನ್ನೂ ಬಾಡಿಗೆ ಮನೆಯಲ್ಲೇ ಇದ್ದಾರೆ ಎಂದರೆ ಅನೇಕರು ಆಶ್ಚರ್ಯಪಡುತ್ತಾರೆ. ಆದರೆ ಇದು ಸತ್ಯ.

'ನಾನು ಗಾಂಧೀಜಿಯವರ ದಾರಿಯಲ್ಲಿ ನಡೆದಿರುವೆ; ನಾನು ಬದುಕಿದ ರೀತಿಯಲ್ಲಿ ನನಗೆ ಸಂತೃಪ್ತಿ ದೊರೆತಿದೆ; ನನ್ನ ಶಕ್ತಿ ಇದ್ದಷ್ಟು ಈ ಸಮಾಜದಲ್ಲಿ ಪರಿವರ್ತನೆ ತರಲು ಪ್ರಯತ್ನಿಸಿದ್ದೇನೆ' ಎಂಬಲ್ಲಿ ಅವರ ನಮ್ರತೆ, ಅವರ ಪ್ರತಿಯೊಂದು ನುಡಿ-ನಡೆಯಲ್ಲಿ ಪ್ರತಿಫಲನಗೊಳ್ಳುತ್ತದೆ.

(ಆಧಾರ: ಬಸೂ ಮೇಗಲಕೇರಿ ಅವರ ಒಂದು ಬರಹ)

ಅನ್ಯಾಯ ಎದುರಿಸಲು ಉತ್ತಮ ಮಾರ್ಗ ನಾಗರಿಕ ಅಸಹಕಾರ ಆಂದೋಲನ

ಅನ್ಯಾಯದ ಎದುರಿಗೆ ತಲೆಬಾಗಿ ನಿಲ್ಲುವುದು ಅಥವಾ ಅದನ್ನು ಹಿಂಸೆಯ ಸಹಾಯದಿಂದ ಎದುರಿಸುವುದು ಎಂಬ ಎರಡೇ ದಾರಿಗಳನ್ನು ಕಂಡಿದ್ದ ಪ್ರಪಂಚಕ್ಕೆ ಗಾಂಧೀಜಿ ಸೂಚಿಸಿದ ಮೂರನೇ ದಾರಿ ನಾಗರಿಕ ಅಸಹಕಾರ ಆಂದೋಲನ. ಈ ದಾರಿಯನ್ನು ಅವರು ತಮ್ಮ ಜೀವನದಲ್ಲೇ ಅನುಷ್ಠಾನಕ್ಕೆ ತಂದು, ಅದರ ಮಹತ್ವವನ್ನು ತಿಳಿಸಿ, ಆ ದಾರಿಯಲ್ಲೇ ಭಾರತಕ್ಕೆ ಸ್ವಾತಂತ್ರ್ಯವನ್ನೂ ತಂದುಕೊಡುವಲ್ಲಿ ಅವರು ಯಶಸ್ವಿಯಾದುದು ಆಧುನಿಕ ಚರಿತ್ರೆಯ ಅತಿ ರೋಚಕವಾದ ತಥ್ಯ.


ಗಾಂಧೀಜಿ ನಿಧನರಾದ ಬಳಿಕವೂ ಇದೇ ದಾರಿಯಲ್ಲಿ ಹಲವು ಹತ್ತು ಪ್ರಯತ್ನಗಳು ನಡೆದು, ನಾಗರಿಕ ಅಸಹಕಾರ ಆಂದೋಲನದ ಪ್ರಸ್ತುತತೆಯನ್ನು ಮತ್ತೆ ಮತ್ತೆ ಸಾಬೀತುಗೊಳಿಸಿದ ಉದಾಹರಣೆಗಳಾಗಿ ನೆಲ್ಸನ್ ಮಂಡೇಲಾ ಅವರ ಹೋರಾಟ, ಆಂಗ್ ಸಾನ್ ಸೂ ಕಿ ಅವರ ಹೋರಾಟ ಇತ್ಯಾದಿಗಳು ನಮಗೆ ಕಂಡು ಬರುತ್ತವೆ.

ಅರ್ಧಶತಮಾನದ ಹಿಂದೆ ತನ್ನ ನೆರೆರಾಷ್ಟ್ರ ಟಿಬೆಟ್ ಮೇಲೆ ದಾಳಿ ಮಾಡಿದ ಚೀನಾದ ಆಕ್ರಮಣವನ್ನು ಸ್ವಯಂ ಗಡೀಪಾರಾಗಿ, ಈಗ ಭಾರತದಲ್ಲಿ ನೆಲೆಸಿರುವ ದಲಾಯ್ ಲಾಮಾ ಅವರು ಆರು ಶತಮಾನಗಳಿಂದ ಆಶ್ರಯಿಸಿರುವುದು ಅಹಿಂಸಾತ್ಮಕ ಆಂದೋಲನವನ್ನೇ. ಈ ಹಿನ್ನೆಲೆಯಲ್ಲಿ 'ಪ್ರಸ್ತುತ ಪ್ರಪಂಚದಲ್ಲಿ ನಾಗರಿಕ ಅಸಹಕಾರ ಎಂಬ ಅಸ್ತ್ರದ ಮಹತ್ವ' ಕುರಿತು ಈ ತಿಂಗಳ 18ರಂದು ಮಹಾತ್ಮಾ ಗಾಂಧೀಜಿ ಅವರ ಮರಿಮೊಮ್ಮಗ ಮತ್ತು ಮಹಾತ್ಮಾ ಗಾಂಧಿ ಫೌಂಡೇಷನ್ ಅಧ್ಯಕ್ಷರಾದ ತುಷಾರ್ ಗಾಂಧಿ ಅವರು ಕೇರಳದ ಕೋಚಿ ಪಟ್ಟಣದಲ್ಲಿ ಮಾತನಾಡಲಿದ್ದಾರೆ.


ಕೋಚಿ ಬಳಿಯ ಎಡ್ಡಪಲ್ಲಿಯ 'ಕೇರಳ ಇತಿಹಾಸ ಮ್ಯೂಜಿಯಂ ಸಭಾಂಗಣ'ದಲ್ಲಿ ನಡೆಯಲಿರುವ ಈ ಕಾರ್ಯಕ್ರಮವನ್ನು ಮುಂಬೈ ಮೂಲದ 'ಫ್ರೆಂಡ್ಸ್ ಆಫ್ ಟಿಬೆಟ್' ಸಂಘಟನೆ (ಅಂಚೆ ಪೆಟ್ಟಿಗೆ 16674, ಮುಂಬಯಿ–400 050 ದೂರವಾಣಿ: 94003–54354/90613–54354) ಕೇರಳದ ಮಿತ್ರರು ಏರ್ಪಡಿಸಿದ್ದಾರೆ.

ಅಹಿಂಸಾ ಮಾರ್ಗದಲ್ಲಿ ಟಿಬೆಟ್ ದಶಕಗಳಿಂದಲೂ ನಡೆಸಿಕೊಂಡು ಬಂದಿರುವ ಹೋರಾಟಕ್ಕೆ ತುಷಾರ್ ಗಾಂಧಿ ನಿರಂತರವಾಗಿ ನೈತಿಕ ಬೆಂಬಲ ನೀಡುತ್ತಾ ಬಂದಿದ್ದಾರೆ. ಕಳೆದ ವರ್ಷ ಅವರು ಇದೇ ಸಂಘಟನೆಯ ಕಾರ್ಯಕ್ರಮದಲ್ಲಿ 'ಗಾಂಧೀಜಿ ನಡೆ ನಮಗೆ ನೀಡುವ ಪಾಠ' ಕುರಿತು ಮಾತನಾಡಿದ್ದರು.

■



ತುಷಾರ್ ಗಾಂಧಿ



ದಲಾಯ್ ಲಾಮಾ

ಗಾಂಧೀಜಿ

ಸಾಮಾನ್ಯರಿಗೆ ಸಹಕಾರಿ-ಆಳುವವರಿಗೆ ಬೇತಾಳ



ಗಾಂಧೀ ತತ್ವಗಳನ್ನು ಅಳವಡಿಸಿಕೊಂಡರೆ ಗ್ರಾಮ/ಸಮುದಾಯ ಕೇಂದ್ರಿತ ಉದ್ಯೋಗಗಳಿಂದ ನಡೆಯುವ ಉತ್ಪಾದನೆಯ ಆಧಾರದಲ್ಲೇ ಗ್ರಾಮ ಸ್ವರಾಜ್ಯ ರೂಪುತಾಳಲು ಸಾಧ್ಯ. ಪೊರಕೆಯಿಂದ ಮಡಕೆಯವರೆಗೆ ಕೈಮಗ್ಗದಿಂದ ಕಂಬಳಿವರೆಗೆ ನಡೆಯುವ ನಮ್ಮ ಪಯಣವೇ ಪರ್ಯಾಯ ನಾಗರಿಕತೆಯನ್ನು ಸೃಷ್ಟಿ ಮಾಡುವಂಥದ್ದು.

(ಆಧಾರ: ಕೆ.ಪಿ.ಸುರೇಶ ಅವರ ಒಂದು ಲೇಖನ)

ಗಾಂಧಿ ಮತ್ತೆ ಮತ್ತೆ ಚಿಗುರೊಡೆವ ಪರಿ ಬೆರಗು ಹುಟ್ಟಿಸುತ್ತದೆ. ಗಾಂಧಿ ತಾತ್ವಿಕತೆಯ ಕೆಲವು ಅಂಶಗಳನ್ನು ಮುಂದಿಟ್ಟುಕೊಂಡು ನೋಡಿದರೆ, ಅವರು ನಮ್ಮ ಅಂತ: ಸಾಕ್ಷಿಯಾಗಿ, ಆಳುವವರ ಅಂಗಾಲ ಮುಳ್ಳಾಗಿ, ಸೋತವರ ಊರುಗೋಲಾಗಿ ಕಾಣುತ್ತಾರೆ.

ಗಾಂಧೀಯವರ ಗ್ರಾಮಸ್ವರಾಜ್ಯ ಮತ್ತು ವಿಕೇಂದ್ರೀಕರಣ ಪರಿಕಲ್ಪನೆ, ಆರ್ಥಿಕ ನೀತಿಯ ತಳಪಾಯವಾದ ಅಸ್ತೇಯ-ಅಪರಿಗ್ರಹ, ಸರ್ವಧರ್ಮ ಸಮಭಾವ ಈ ಮೂರೂ ತತ್ವಗಳು ವಿಶ್ವವನ್ನು ಅಳೆಯುವ ಮಾನದಂಡವಾಗಿ ಕಂಡು ಬರುತ್ತವೆ.

ನೆಹರೂ ಯುಗದ 'ಮಾಯಿ-ಬಾಪ್' ಧೋರಣೆ ಸತತವಾಗಿ ಕೇಂದ್ರೀಕರಣದ ಸಂಸ್ಥೆಗಳನ್ನೂ, ನಿರ್ವಹಣೆಯನ್ನೂ ಗಟ್ಟಿಗೊಳಿಸುತ್ತಾ ಬಂದಿತು. ಜನರು ತಾವೇ ನಿರ್ಧರಿಸುವಷ್ಟು ಶಕ್ತರಲ್ಲ; ನಾವು ಅವರ ಪರವಾಗಿ ಚಿಂತಿಸಿ, ಕಾರ್ಯಕ್ರಮ ಮತ್ತು ಯೋಜನೆಗಳನ್ನು ರೂಪಿಸಿ, ಜಾರಿಗೊಳಿಸುವುದು ಅಗತ್ಯ ಎಂಬ ಧೋರಣೆ ಅದು. ಅದರ ದುಷ್ಪರಿಣಾಮಗಳನ್ನು ನಾವು ಇಂದು ನೋಡುತ್ತಿದ್ದೇವೆ.

ಜನರು ಸಂಪೂರ್ಣವಾಗಿ ಸರ್ಕಾರಗಳನ್ನೇ ಅವಲಂಬಿಸಿರುವುದು ಕಾಣುತ್ತಿದೆ. ಕೃಷಿಕ್ಷೇತ್ರದಲ್ಲಿ ಈ ವಿಕೃತಿಯು ಅಂಗೈ ಗಾಯದಷ್ಟೇ ಸ್ಪಷ್ಟವಾಗಿದೆ. ಈಗ ಆಗಿರುವ ಅಧಿಕಾರದ ವಿಕೇಂದ್ರೀಕರಣದ ವಿಕೃತ ಮಾದರಿಗಳು ಕಣ್ಣಿಗೆ ರಾಚುತ್ತವೆ. ಸ್ವರಾಜ್ಯ, ಸ್ವಾಯತ್ತತೆ ಇತ್ಯಾದಿ ಪರಿಕಲ್ಪನೆಗಳನ್ನು ನಿ:ಶೇಷ ಗೊಳಿಸುವ ಪ್ರಯತ್ನ ನಡೆದಿದೆ.

ನೆಹರೂ ಕಾಲದಲ್ಲಿ ಕನಿಷ್ಠ ಈ ಧೋರಣೆಗೆ ಮಾನವೀಯತೆಯ ಲೇಪವಾದರೂ ಇತ್ತು; ಆದರೆ ಈಗ ಅದೂ ಮಾಯವಾಗಿದೆ. ಬಾಪೂ ಸೇರಿದಂತೆ ಅನೇಕ ನಾಯಕರು ಸಮುದಾಯದ ವಿವೇಕ ಮತ್ತು ವಿವೇಚನೆಯ ಮೇಲೆ ಇಟ್ಟಿದ್ದ ನಂಬಿಕೆಯನ್ನು ನಂತರದ ಆಡಳಿತಗಾರರು ಯಾರೂ ಇಟ್ಟಿಲ್ಲ.

ಒಂದಾನೊಂದು ಕಾಲದಲ್ಲಿ ದೇಶದಲ್ಲಿ ಕೋಟ್ಯ

ಧಿಪತಿಗಳು ಬೆರಳೆಣಿಕೆಯಷ್ಟಿದ್ದರು. ಆದರೆ ಇವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಾ ಸಾಗಿದೆ. ದೇಶದ ಒಟ್ಟು ಸಂಪತ್ತಿನಲ್ಲಿ 58%ರಷ್ಟು ಸಂಪತ್ತು ಕೆಲವು ವ್ಯಕ್ತಿಗಳಿಗೆ ಸೇರಿದೆ. ಗ್ರಾಮಭಾರತ ತೀವ್ರ ಸಂಕಷ್ಟಕ್ಕೆ ಸಿಲುಕಿದೆ. ಇದನ್ನು ಮಸುಕುಗೊಳಿಸಲು ಸರ್ಕಾರಗಳು ವಿವಿಧ ಕಲ್ಯಾಣ ಕಾರ್ಯ ಕ್ರಮಗಳನ್ನು 'ಭಾಗ್ಯ' ಯೋಜನೆಗಳನ್ನು ಜಾರಿಗೊಳಿಸಲು ಮುಂದಾಗಿವೆ. ದೇಶದ ಆರ್ಥಿಕ ನೀತಿ ಬಿಗಡಾಯಿಸು ತ್ತಿರುವುದಕ್ಕೆ ಮತ್ತು ದೇಶದಲ್ಲಿ ಕೋಟಿ ಕೋಟಿ ಜನರು ಬಡತನದ ಕೂಪದಲ್ಲಿ ನರಳುತ್ತಿರುವುದಕ್ಕೆ ಸಂಬಂಧ ಇದೆ ಎಂಬುದನ್ನು ಸರ್ಕಾರಗಳು ಒಪ್ಪುತ್ತಲೇ ಇಲ್ಲ.

ಗಾಂಧೀಜಿ ಹೇಳಿದ ಅಸ್ತೇಯ-ಅಪರಿಗ್ರಹ ತತ್ವವಾಗಲಿ, ಬಸವಣ್ಣ ಹೇಳಿದ 'ಕಳಬೇಡ-ಕೊಲಬೇಡ' ಎಂಬ ತತ್ವವಾಗಲಿ ವ್ಯಕ್ತಿಗಳಿಗಷ್ಟೇ ನೀಡಿದ ಮಾರ್ಗದರ್ಶನ ಅಲ್ಲ. ಇದು ಇಡೀ ಸಮಾಜಕ್ಕೆ ಅನ್ವಯವಾಗುವಂಥದ್ದು. ಆದರೆ ಇದಕ್ಕೆ ಕುರುಡಾಗಿರುವ ಸರ್ಕಾರಗಳು, ಸಮುದಾಯದ ಸಂಪನ್ಮೂಲಗಳನ್ನು ಕಾರ್ಪೊರೇಟ್ ಸಂಸ್ಥೆಗಳ ವಶಕ್ಕೆ ನೀಡುವ ಘಾತುಕ ದಾರಿಯನ್ನು ಹಿಡಿದಿವೆ.

ಗಾಂಧೀ ತತ್ವಗಳನ್ನು ಅಳವಡಿಸಿಕೊಂಡರೆ, ಗ್ರಾಮ/ಸಮುದಾಯ ಕೇಂದ್ರಿತ ಉದ್ಯೋಗಗಳಿಂದ ನಡೆಯುವ ಉತ್ಪಾದನೆಯ ಆಧಾರದಲ್ಲೇ ಗ್ರಾಮ ಸ್ವರಾಜ್ಯ ರೂಪು ತಾಳಲು ಸಾಧ್ಯ. ಪೊರಕೆಯಿಂದ ಮಡಕೆಯವರೆಗೆ, ಕೈಮಗ್ಗದಿಂದ ಕಂಬಳಿವರೆಗೆ ನಡೆಯುವ ನಮ್ಮ ಪಯಣವೇ ಪರ್ಯಾಯ ನಾಗರಿಕತೆಯನ್ನು ಸೃಷ್ಟಿ ಮಾಡುವಂಥದ್ದು. ಜಿ.ಎಸ್.ಟಿ. ವಿರುದ್ಧ ಗುಡುಗುತ್ತಿರುವ ನಮ್ಮ ರಂಗಕರ್ಮಿ, ಗಾಂಧೀವಾದಿ ಪ್ರಸನ್ನ ಅವರು ಎತ್ತಿರುವ ಧ್ವನಿಯ ಮೂಲ ಸೆಲೆ ಇದೇ ಆಗಿದೆ.

ಗಾಂಧೀಜಿ ಈ ದೇಶದ ಎಲ್ಲಾ ಬಾಧೆಗಳನ್ನು ಎದುರಿಸಲು ತಮ್ಮ ತತ್ವಗಳನ್ನು ನೀಡಿದ್ದಾರೆ. ಅವರು ತಳ ಸಮುದಾಯಗಳಿಗೆ ಸಹಯೋಗಿ; ಆಳುವವರಿಗೆ ಬೆನ್ನು ಹತ್ತಿದ ಬೇತಾಳ.

■

ಇದು ಆದೀತೇ?

ಮಹಾತ್ಮಾ ಗಾಂಧೀಜಿಯವರನ್ನು ಇಡೀ ವಿಶ್ವವೇ ಆರಾಧಿಸುತ್ತದೆ; ಗೌರವಿಸುತ್ತದೆ. ಅವರು ನೀಡಿದ ಸತ್ಯ, ಶಾಂತಿ, ಅಹಿಂಸೆ, ಸ್ವಚ್ಛತೆ, ಸಾತ್ವಿಕತೆ ಇತ್ಯಾದಿ ಎಲ್ಲಾ ಮೌಲ್ಯಗಳು ಕಾಣೆಯಾಗುತ್ತಿವೆ. ಆಳುವವರಿಗೆ ಗಾಂಧೀ ಚಾಟಿ ಏಟು ತಗಲುತ್ತಿಲ್ಲ. ಅವರ ಚರ್ಮ ಅಷ್ಟರ ಮಟ್ಟಿಗೆ ಜಡ್ಡುಗಟ್ಟಿ ಹೋಗಿದೆ. ದೇಶವನ್ನು ವಿಮೋಚನೆ ಮಾಡಲು ಗಾಂಧೀಜಿ ಅಸಹಕಾರ ಚಳವಳಿಯನ್ನು ಅಸ್ತ್ರ ಮಾಡಿಕೊಂಡರು. ಜನರ ಆತ್ಮಸಾಕ್ಷಿಯನ್ನು ಬಡಿದೆಚ್ಚರಿಸಿದರು. ಸ್ವಾತಂತ್ರ್ಯ, ಸ್ವಾವಲಂಬನೆ ಮತ್ತು ಸಹಿಷ್ಣುತೆಗಳನ್ನು ನೆಲೆಗೊಳಿಸಲು ಅಹರ್ನಿಶಿ ಹೋರಾಡಿದರು. ಮದ್ಯಪಾನ ಮುಂತಾದ ಸಾಮಾಜಿಕ ಅನಿಷ್ಟಗಳ ವಿರುದ್ಧ ಜನಾಭಿಪ್ರಾಯ ಮೂಡಿಸಿದರು. ಗ್ರಾಮಸ್ವರಾಜ್ಯವೇ ಧ್ಯೇಯ ಎಂದು ಸಾರಿದರು. ಸತ್ಯ ಮತ್ತು ನ್ಯಾಯವನ್ನು ಪ್ರತಿಪಾದಿಸಿದರು; ಅನ್ಯಾಯದ ಕಾನೂನುಗಳನ್ನು ಮುರಿದರು; ಜೈಲುಗಳಿಗೆ ಹೋದರು.

ಆದರೇನು? ಸ್ವತಂತ್ರ ಭಾರತವು ಗಾಂಧೀಜಿ ತೋರಿದ ದಾರಿಯಲ್ಲಿ ನಡೆಯಲಿಲ್ಲ. ಹಾಗಾಗೇ ಇಲ್ಲಿ ಬಡತನ, ಅಸ್ಪೃಶ್ಯತೆ, ಅಸಮಾನತೆ, ಜಾತೀಯತೆ, ಲಿಂಗ ತಾರತಮ್ಯ, ಆರ್ಥಿಕ ಶೋಷಣೆ, ದೌರ್ಜನ್ಯಗಳು ಕಾಡುತ್ತಲೇ ಇವೆ.

ಗಾಂಧೀಜಿ ಆಡಳಿತಗಾರರಿಗೆ ಅಸ್ಪೃಶ್ಯರಾಗಿ ಉಳಿದಿದ್ದೇಕೆ? ಗಾಂಧೀಜಿ ಯುವಜನರ ಹೃದಯ ದೊಳಕ್ಕೆ ಸ್ಥಾನ ಪಡೆದುಕೊಳ್ಳಲು ಇನ್ನೂ ಎಷ್ಟು ದಶಕಗಳು ಬೇಕು? ದೇಶದ ದುರ್ಗತಿಯು ಇನ್ನೂ ಎಷ್ಟು ಕೆಳಮಟ್ಟಕ್ಕೆ ಇಳಿಯಬೇಕು? ಭಾಷಣ, ಬೋಧನೆ, ಉಪದೇಶಗಳಿಂದ ಮಾತ್ರ ಗಾಂಧೀಜಿಯನ್ನು ಅರಿಯುವುದು ಕಡುಕಷ್ಟ. ಯುವಜನರಿಗೆ ಜೀವಂತ ಆದರ್ಶಗಳು ಬೇಕು.

ಆದುದರಿಂದ, ಈಗ ಗಾಂಧೀಜಿಯನ್ನು ಹೃದಯದೊಳಕ್ಕೆ ಕರೆದುಕೊಳ್ಳಲು ನಮ್ಮ ವಿದ್ಯಾರ್ಥಿಗಳನ್ನು, ಯುವಜನರನ್ನು ನಾವು ತಯಾರು ಮಾಡಬೇಕಿದೆ.

ಇದು ನಿಖರವಾಗಿ ಹೇಗೆ? ಯಾವಾಗ? ಎಲ್ಲಿಂದ ಶುರು ಮಾಡುವುದು? ಇತ್ಯಾದಿ ಪ್ರಶ್ನೆಗಳಿಗೆ ಹಿರಿಯರು ಉತ್ತರಿಸಬೇಕು; ಆ ನಿಟ್ಟಿನಲ್ಲಿ ಕಾರ್ಯ ನಡೆಯಬೇಕು.

ಇದು ಆದೀತೆ?

■

(ಅ) ಮಕ್ಕಳು ಎಂದರೆ ಯಾರು?

18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಎಲ್ಲರನ್ನೂ ಮಕ್ಕಳು ಎಂದು ಪರಿಗಣಿಸಲಾಗಿದೆ. ಇದು ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಸಮಾವೇಶದಲ್ಲಿ ಒಪ್ಪಿತವಾಗಿದೆ. ಇದನ್ನು ಭಾರತ ಸರ್ಕಾರ ತನ್ನ 'ರಾಷ್ಟ್ರೀಯ ಮಕ್ಕಳ ನೀತಿ–2013'ರಲ್ಲಿ ದೃಢಪಡಿಸಿದೆ.

(ಆ) ಮಕ್ಕಳಿಗೆ ವಿಶೇಷ ಹಕ್ಕುಗಳು ಏಕೆ ಬೇಕು?

ಪೋಷಕರು ಮಕ್ಕಳನ್ನು ತಮ್ಮ ಆಸ್ತಿಯಂತೆ ಪರಿಭಾವಿಸುತ್ತಾರೆ. 'ಮಕ್ಕಳಿಗೆ ತಮ್ಮದೇ ಆದ ಅಸ್ತಿತ್ವವಿದೆ' ಎಂಬುದನ್ನು ಮರೆತು, ಅವರ ನಡೆ–ನುಡಿಗಳನ್ನು, ಆಸೆ–ಕನಸುಗಳನ್ನು ತಾವೇ ನಿರ್ಧರಿಸುತ್ತಾರೆ. ಮಕ್ಕಳು, ತಮ್ಮ ತಂದೆ–ತಾಯಿಗಳಿಂದ, ನೆರೆಹೊರೆಯವರಿಂದ, ತಮ್ಮ ಪರಿಸರ–ಸಮಾಜದಿಂದ ಬಹುಬೇಗ ಪ್ರಭಾವಕ್ಕೆ ಒಳಗಾಗುತ್ತಾರೆ. ಏಕೆಂದರೆ, ಅವರು ವಿಕಾಸದ ಹಾದಿಯಲ್ಲಿ ಹೊಸ ಜ್ಞಾನ, ವಿಚಾರಗಳನ್ನು ಪಡೆಯಲು ತುಡಿಯುತ್ತಿರುತ್ತಾರೆ.

ಮಕ್ಕಳಲ್ಲಿ ಮುಗ್ಧತೆ ಇರುತ್ತದೆ. ಅದನ್ನು ಗ್ರಹಿಸುತ್ತಲೇ ಅವರಿಗೆ ವಾಸ್ತವ ಸಮಾಜದ ಪರಿಚಯವನ್ನು ಮಾಡಿಕೊಡಬೇಕಾಗುತ್ತದೆ. ಅವರ ಮನಸ್ಸು ಕಲಿಕೆಗೆ ಮುಕ್ತವಾಗಿರುತ್ತದೆ. ಇದನ್ನು ಯಾವ ಕಾರಣಕ್ಕೂ, ಯಾರೂ ದುರುಪಯೋಗ ಮಾಡಿಕೊಳ್ಳಬಾರದು. ಮಕ್ಕಳು ದೌರ್ಜನ್ಯ ಹಿಂಸೆಗಳಿಗೆ, ನಲುಗಿ ಹೋಗಬಾರದು. ಆದ್ದರಿಂದ ಎಲ್ಲಾ ಮಕ್ಕಳಿಗೆ ವಿಶೇಷ ಹಕ್ಕುಗಳನ್ನು ಒದಗಿಸಬೇಕು.

ಈ ಹಿನ್ನೆಲೆಯಲ್ಲಿ ಮಕ್ಕಳ ಹಕ್ಕುಗಳ ಬಗ್ಗೆ ಗಮನ ಹರಿಸಿದ ವಿಶ್ವಸಂಸ್ಥೆಯು 1989ರಲ್ಲಿ 54 ಪರಿಚ್ಛೇದಗಳನ್ನು ಒಳಗೊಂಡ **'ಮಕ್ಕಳ ಹಕ್ಕುಗಳ ಒಡಂಬಡಿಕೆ'**ಯನ್ನು ಸಿದ್ಧಪಡಿಸಿ, ಘೋಷಿಸಿತು. ಈ ಒಡಂಬಡಿಕೆಗೆ ಭಾರತ ಸರ್ಕಾರವು 1992 ಡಿಸೆಂಬರ್ 11ರಂದು ಸಹಿ ಮಾಡುವ ಮೂಲಕ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಕ್ಕಳ ಹಕ್ಕುಗಳ ರಕ್ಷಣೆಗೆ ತನ್ನ ಬದ್ಧತೆಯನ್ನು ತೋರಿತು.

(ಇ) ವಿಶ್ವಸಂಸ್ಥೆ ಘೋಷಿಸಿದ ಮಕ್ಕಳ ಹಕ್ಕುಗಳ ಒಡಂಬಡಿಕೆಯ 54 ಪರಿಚ್ಛೇದಗಳು

1. ಹದಿನೆಂಟು ವರ್ಷಕ್ಕಿಂತ ಕಡಿಮೆ ಇರುವ ಎಲ್ಲರನ್ನೂ ಮಕ್ಕಳೆಂದು ಪರಿಗಣಿಸುವುದು.
2. ಮಕ್ಕಳಲ್ಲಿ ಯಾವುದೇ ಆಧಾರದ ಮೇಲೂ ಎಲ್ಲಿಯೂ ಭೇದ–ಭಾವ ಮಾಡುವಂತಿಲ್ಲ.
3. ಯಾವುದೇ ವಿಷಯದಲ್ಲಿ, ಯಾರೇ ಆಗಲಿ, ಯಾವುದೇ ನಿರ್ಧಾರವನ್ನು ಕೈಗೊಳ್ಳುವಾಗ, 'ಈ



ಮಕ್ಕಳ ಹಕ್ಕುಗ

ನಿರ್ಧಾರಗಳು ಮಕ್ಕಳ ಮೇಲೆ ಯಾವ ಪರಿಣಾಮ ಬೀರಿಯಾವು?' ಎಂಬ ಬಗ್ಗೆ ಗಮನ ಹರಿಸಬೇಕು.

4. ಮಕ್ಕಳ ಹಕ್ಕುಗಳನ್ನು ಒದಗಿಸುವುದಕ್ಕೆ ಬೇಕಾದ ನಿರ್ಧಾರಗಳು, ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ಸರ್ಕಾರಗಳು ನಿರಂತರವಾಗಿ ಹಮ್ಮಿಕೊಳ್ಳಬೇಕು.
5. ಮಕ್ಕಳ ಬೆಳವಣಿಗೆ, ರಕ್ಷಣೆ, ಪೋಷಣೆ ಮಾಡುವ ಮತ್ತು ಅವರಿಗೆ ಮಾರ್ಗದರ್ಶನ ನೀಡುವ ಜವಾಬ್ದಾರಿಯನ್ನು ತಾಯಿ, ತಂದೆ, ಪೋಷಕರು ತೆಗೆದುಕೊಳ್ಳಬೇಕು.
6. ಎಲ್ಲ ಮಕ್ಕಳಿಗೂ ಬದುಕುವ ಮತ್ತು ಆರೋಗ್ಯದಿಂದ ಜೀವಿಸುವ ಹಕ್ಕು ಇದೆ.
7. ಮಕ್ಕಳು ನಾಳೆಯ ಪ್ರಜೆಗಳಲ್ಲ; ಇಂದಿನಿಂದಲೇ ಅವರು ಪ್ರಜೆಗಳು. ಹುಟ್ಟಿದ ಮಗುವಿಗೆ ಹೆಸರು, ದೇಶ ಮತ್ತು ಕುಟುಂಬವನ್ನು ಹೊಂದುವ ಹಕ್ಕು ಇದೆ.



ಮತ್ತು ವಿಶ್ವಸಂಸ್ಥೆ

8. ಮಕ್ಕಳ ಹೆಸರು, ಗುರುತು, ಗೌರವದ ಹಕ್ಕಿಗೆ ಯಾರೂ ತೊಂದರೆ, ಅವಮಾನ ಮಾಡಬಾರದು.
9. ತಂದೆ, ತಾಯಿ, ಪೋಷಕರಿಂದ ಮಕ್ಕಳನ್ನು ಯಾರೂ ಯಾವುದೇ ಕಾರಣಕ್ಕೂ ಬೇರ್ಪಡಿಸುವಂತಿಲ್ಲ.
10. ಮಕ್ಕಳು ಮತ್ತು ಪೋಷಕರನ್ನು ಅಗಲಿಸುವಂತಿಲ್ಲ. ಮಕ್ಕಳು ತಮ್ಮ ತಂದೆ/ತಾಯಿ/ಪೋಷಕರ ಜೊತೆಯಲ್ಲಿರಲು ಸರ್ಕಾರ ಅವಕಾಶ ಮಾಡಿಕೊಡಬೇಕು.
11. ಮಕ್ಕಳ ಕಳ್ಳತನ, ಸಾಗಣೆ, ಮಾರಾಟ, ಬಂಧನಗಳು ಶಿಕ್ಷಾರ್ಹ ಅಪರಾಧಗಳು.
12. ಮಕ್ಕಳಿಗೆ ಸಂಬಂಧಿಸಿದ ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ಮಕ್ಕಳ ಅಭಿಪ್ರಾಯ ಕೇಳಬೇಕು. ತಮಗೆ ಸಂಬಂಧಿಸಿದ ವಿಷಯಗಳ ಬಗ್ಗೆ ತಮ್ಮ ಅಭಿಪ್ರಾಯ ಮಂಡಿಸುವ ಹಕ್ಕು ಮಕ್ಕಳಿಗೆ ಇದೆ. ಇದನ್ನು ವಯಸ್ಕರು ಮಾನ್ಯ ಮಾಡಬೇಕು.
13. ದೇಶ, ಭಾಷೆ ಮತ್ತು ಗಡಿಗಳ ಅಂತರವಿಲ್ಲದೆ

'ಮಕ್ಕಳು ಮುಗ್ಧತೆ ಅಂತ:ಕರಣ ಬೆಳೆಸಿಕೊಳ್ಳುವುದಕ್ಕೆ ಪೂರಕವಾದ ವಾತಾವರಣ ನಿರ್ಮಿಸುವುದು ಎಲ್ಲ ಹಿರಿಯರ ಮತ್ತು ಸಮಾಜದ ಹೊಣೆ;. ಇದು ಸಾಧ್ಯವಾದಲ್ಲಿ ಮಕ್ಕಳೇ ಶಾಂತಿದೂತರಾಗುತ್ತಾರೆ; ಅಹಿತವು ದೂರವಾಗುತ್ತದೆ' ಎಂದಿದ್ದರು ಗಾಂಧೀಜಿ.

ನವೆಂಬರ್ 14, ಮಕ್ಕಳ ದಿನ. ಅಂದು ದೇಶದ ಅನೇಕ ಕಡೆ ಸಂಭ್ರಮಾಚರಣೆ ನಡೆಯುತ್ತದೆ. ಮಕ್ಕಳಲ್ಲಿ ಸ್ಫೂರ್ತಿ, ಉತ್ಸಾಹ ತುಂಬುವ ಕೆಲಸದ ಜೊತೆಗೆ ಅವರಿಗೆ ನಿಗದಿಪಡಿಸಲಾಗಿರುವ ಹಕ್ಕುಗಳು ಸಿಗುತ್ತಿವೆಯೆ ಎಂಬ ಕಡೆಗೂ ಹಿರಿಯರ ಮತ್ತು ಆಡಳಿತದ ಗಮನ ಹೋಗಬೇಕು.

ವಿಶ್ವಸಂಸ್ಥೆಯು ತಿಳಿಸಿರುವಂತೆ ಮಕ್ಕಳ ಹಕ್ಕುಗಳು ಇಲ್ಲಿವೆ. ಇವುಗಳನ್ನು ಗಮನಿಸಿ, ಮಕ್ಕಳಿಗೆ ನಾವು ಇನ್ನೂ ಏನೇನು ಸೌಲಭ್ಯಗಳನ್ನು ಒದಗಿಸಿಕೊಡುವ ನಮ್ಮ ಕರ್ತವ್ಯವನ್ನು ನಿರ್ವಹಿಸುವುದು ಬಾಕಿ ಇದೆ ಎಂಬುದನ್ನು ಅರಿತುಕೊಳ್ಳಬೇಕು.

ಮಾಹಿತಿ ಪಡೆಯುವ ಮತ್ತು ವಿಚಾರ ತಿಳಿಯುವ ಹಕ್ಕು ಪ್ರತಿಯೊಬ್ಬ ಮಗುವಿಗೆ ಇದೆ.

14. ತಂದೆ-ತಾಯಿಗಳ ಮಾರ್ಗದರ್ಶನದಲ್ಲಿ ವಿಚಾರ ಮಾಡುವ, ತಮ್ಮ ಇಷ್ಟದಂತೆ ಆಲೋಚಿಸುವ, ಧಾರ್ಮಿಕ ವಿಧಿಗಳನ್ನು ಆಚರಿಸುವ ಹಕ್ಕು ಮಕ್ಕಳಿಗೆ ಇದೆ.

15. ಎಲ್ಲ ಮಕ್ಕಳೊಡನೆ ಸೇರುವ, ಸಂಘ ರಚಿಸಿಕೊಳ್ಳುವ, ಚರ್ಚಿಸುವ ಮತ್ತು ನಿರ್ಧಾರ ಮಾಡುವ ಹಕ್ಕು ಮಕ್ಕಳಿಗಿದೆ.

16. ಮಕ್ಕಳಿಗೆ ಖಾಸಗೀತನದ ಹಕ್ಕಿದೆ.

17. ತಮ್ಮ ಸುತ್ತಮುತ್ತಲಿನ ಮತ್ತು ಜಗತ್ತಿನ ಮಾಹಿತಿ ತಿಳಿದುಕೊಳ್ಳಲು ಅಗತ್ಯವಾದ ಪುಸ್ತಕ, ಪತ್ರಿಕೆ, ರೇಡಿಯೋ, ದೂರದರ್ಶನ, ಅಂತರ್ಜಾಲ, ಸಿನೆಮಾ ಸೌಲಭ್ಯಗಳನ್ನು ಸರ್ಕಾರಗಳು ಮಕ್ಕಳಿಗೆ ಒದಗಿಸಬೇಕು.

18. ತಾಯಿ-ತಂದೆ/ಪೋಷಕರೊಡನೆ ಬೆಳೆಯುವ ಹಕ್ಕು ಎಲ್ಲಾ ಮಕ್ಕಳಿಗೂ ಇದೆ. ಇದು ಪೋಷಕರ ಜವಾಬ್ದಾರಿ. ಇದಕ್ಕೆ ಸರ್ಕಾರದ ಬೆಂಬಲವಿರಬೇಕು.

19. ಮಕ್ಕಳಿಗೆ ಹೊಡೆಯುವುದು, ಬೈಯುವುದು, ಹಿಂಸಿಸು ವುದು, ಕಿರುಕುಳ ನೀಡುವುದು, ಮಕ್ಕಳನ್ನು ನಿರ್ಲಕ್ಷಿಸುವುದು ಇವೆಲ್ಲವೂ ಶಿಕ್ಷಾರ್ಹ ಅಪರಾಧಗಳು.

20. ತಾಯಿ-ತಂದೆ ಪೋಷಕರಿಲ್ಲದ ಮಕ್ಕಳಿಗೆ ವಿಶೇಷ ರಕ್ಷಣೆ ನೀಡಬೇಕು. ಅಂತಹ ಮಕ್ಕಳಿಗೆ ದತ್ತು ಮತ್ತಿತರ ವಿಧಾನಗಳ ಮೂಲಕ ಪರ್ಯಾಯ ಕುಟುಂಬ ವ್ಯವಸ್ಥೆ ಮಾಡಬೇಕು.

21. ಮಕ್ಕಳನ್ನು ದತ್ತು ನೀಡುವಾಗ ಅದು ಅವರ ಹಿತದೃಷ್ಟಿಯಿಂದಲೇ ನಡೆಯಬೇಕು.

22. ಕುಟುಂಬ ಮತ್ತು ಆಶ್ರಯವಿಲ್ಲದಿರುವ ಮಕ್ಕಳನ್ನು ಸಂರಕ್ಷಿಸುವುದು ಸಮಾಜ ಮತ್ತು ಸರ್ಕಾರದ ಕರ್ತವ್ಯ.

23. ದೈಹಿಕ, ಮಾನಸಿಕ ತೊಂದರೆ ಇದ್ದರೂ ಗೌರವ ಯುತವಾದ ಶಿಕ್ಷಣ, ಮನೋರಂಜನೆ, ಆಟೋಟ ಗಳಲ್ಲಿ ಭಾಗವಹಿಸುವ, ಪೂರ್ಣವಾದ ಜೀವನ ನಡೆಸುವ ಹಕ್ಕು ಮಕ್ಕಳಿಗಿದೆ.

24. ಆರೋಗ್ಯ ಸೇವಾ ಸೌಲಭ್ಯಗಳು ಮಕ್ಕಳಿಗೆ ಸಿಗಬೇಕು; ವೈದ್ಯಕೀಯ ನೆರವು, ಮಾಹಿತಿ ನೀಡಿ ಮಕ್ಕಳ ಸಾವು, ಅಂಗವಿಕಲತೆ ಆಗದಂತೆ ರಕ್ಷಣೆ ನೀಡಬೇಕು.

25. ಶಿಕ್ಷಣ, ರಕ್ಷಣೆ ಅಥವಾ ಚಿಕಿತ್ಸೆಗಾಗಿ ಮಕ್ಕಳು ಕುಟುಂಬದಿಂದ ದೂರವಿದ್ದಲ್ಲಿ ಅಲ್ಲಿನ ವ್ಯವಸ್ಥೆ ಅವರಿಗೆ ಪೂರಕವಾಗಿರುವ ಬಗ್ಗೆ ಸರ್ಕಾರ ಕಾಲಕಾಲಕ್ಕೆ ಪರಿಶೀಲನೆ ಮಾಡಬೇಕು.

26. ಬಡವರು, ನಿರ್ಗತಿಕ ಕುಟುಂಬಗಳ ಮಕ್ಕಳ ಪ್ರಗತಿಗಾಗಿ ಸರ್ಕಾರವು ಸಾಮಾಜಿಕ ಭದ್ರತೆ, ವಿಮೆ, ಇತ್ಯಾದಿ ಸೇವೆಗಳನ್ನು ಒದಗಿಸಬೇಕು.

27. ಮಕ್ಕಳ ದೈಹಿಕ, ಮಾನಸಿಕ, ಧಾರ್ಮಿಕ, ನೈತಿಕ, ಸಾಮಾಜಿಕ ಅಭಿವೃದ್ಧಿಗೆ ಪೂರಕವಾಗುವ ಎಲ್ಲಾ ಸವಲತ್ತುಗಳನ್ನು ಒದಗಿಸುವುದು ಪೋಷಕರ ಮತ್ತು ಸರ್ಕಾರದ ಕರ್ತವ್ಯ.

28. ಮಕ್ಕಳಿಗೆ ಉಚಿತ, ಕಡ್ಡಾಯ, ಸಮಾನ ಮತ್ತು ಗುಣಮಟ್ಟದ ಶಿಕ್ಷಣ ಪಡೆಯುವ ಹಕ್ಕು ಇದೆ. ಇದಕ್ಕೆ ಅಡ್ಡಿಪಡಿಸುವವರನ್ನು ಶಿಕ್ಷಿಸುವುದು ಸರ್ಕಾರದ ಕರ್ತವ್ಯ.

29. ವ್ಯಕ್ತಿತ್ವ, ಪ್ರತಿಭೆ, ಮಾನಸಿಕ-ದೈಹಿಕ ಸಾಮರ್ಥ್ಯಗಳು ವಿಕಾಸವಾಗುವಂತಹ ಶಿಕ್ಷಣವು ಮಕ್ಕಳಿಗೆ ಸಿಗಬೇಕು. ಬೇರೆಯವರ ಭಾವನೆ, ಹಕ್ಕುಗಳನ್ನು ಗೌರವಿಸು ವಂತಹ ಮನೋಭಾವವನ್ನು ಶಿಕ್ಷಣವು ಮಕ್ಕಳಲ್ಲಿ ಬೆಳೆಸಬೇಕು.

30. ಅಲ್ಪಸಂಖ್ಯಾತರು ಹಾಗೂ ಮೂಲನಿವಾಸಿಗಳು ಸೇರಿದಂತೆ ಎಲ್ಲಾ ಮಕ್ಕಳಿಗೆ ತಮ್ಮ ಮಾತೃಭಾಷೆ, ಸಂಸ್ಕೃತಿ, ಧರ್ಮವನ್ನು ಅನುಸರಿಸುವ ಹಕ್ಕಿದೆ.

31. ವಿರಾಮ/ವಿಶ್ರಾಂತಿ ಪಡೆಯುವ, ಆಟ, ಮನೋ ರಂಜನೆ, ಸೃಜನಶೀಲ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸುವ ಹಕ್ಕು ಮಕ್ಕಳಿಗಿದೆ.

32. ಆರೋಗ್ಯ, ಶಿಕ್ಷಣ ಅಭಿವೃದ್ಧಿ, ಬಾಲ್ಯ ಅನುಭವಿಸು ವುದಕ್ಕೆ ಅಡ್ಡಿಯಾಗುವ ದುಡಿಮೆಯಲ್ಲಿ ಮಕ್ಕಳನ್ನು ತೊಡಗಿಸುವುದು ಶಿಕ್ಷಾರ್ಹ ಅಪರಾಧ.

33. ಮಕ್ಕಳನ್ನು ಮಾದಕ ವಸ್ತುಗಳ (ಬೀಡಿ, ಸಿಗರೇಟ್, ಗುಟಕಾ, ಹೆಂಡ ಇತ್ಯಾದಿ) ಮಾರಾಟದಲ್ಲಿ ಅಥವಾ ಪ್ರಸಾರದಲ್ಲಿ ತೊಡಗಿಸುವುದು ಅಥವಾ ಮಕ್ಕಳಿಗೆ ಸೇವಿಸಲು ಅವುಗಳನ್ನು ಕೊಡುವುದು ಅಪರಾಧ.

34. ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಮಾಡುವುದು, ಅವರನ್ನು ದೇವದಾಸಿಯನ್ನಾಗಿಸುವುದು, ಅವರ ಬಾಲ್ಯವಿವಾಹ ಮಾಡುವುದು ಶಿಕ್ಷಾರ್ಹ ಅಪರಾಧ.

35. ಮಕ್ಕಳನ್ನು ಅಪಹರಿಸುವುದು, ಸಾಗಣೆ ಮಾಡುವುದು, ಬಚ್ಚಿಡುವುದು, ಮಾರಾಟ ಮಾಡುವುದು, ಶಿಕ್ಷಾರ್ಹ ಅಪರಾಧ.

36. ಮಕ್ಕಳ ಯೋಗಕ್ಷೇಮಕ್ಕೆ, ಒಳಿತಿಗೆ ತಡೆ ಉಂಟು ಮಾಡುವಂತಹ ಯಾವುದೇ ಕೃತ್ಯ ಜರುಗದಂತೆ ನೋಡಿಕೊಳ್ಳುವ ಜವಾಬ್ದಾರಿ ಸರ್ಕಾರದ್ದು.

37. ಮಕ್ಕಳಿಗೆ ಶಿಕ್ಷೆ, ಹಿಂಸೆ ನೀಡಬಾರದು. ಅವರನ್ನು ಅನಧಿಕೃತವಾಗಿ ಬಂಧಿಸಬಾರದು, 18 ವರ್ಷದೊಳಗಿನ ಮಕ್ಕಳು ಯಾವುದೇ ತಪ್ಪು ಮಾಡಿದರೂ, ಕಾನೂನು ಉಲ್ಲಂಘಿಸಿದರೂ ಅವರನ್ನು ಶಿಕ್ಷಿಸುವ ಬದಲು ಅವರ ಮನಃಪರಿವರ್ತನೆಗೆ, ಸುಧಾರಣೆಗೆ ಕ್ರಮ ಕೈಗೊಳ್ಳಬೇಕು.

38. ಸಶಸ್ತ್ರ ಹೋರಾಟಕ್ಕೆ ಅಥವಾ ಸೈನ್ಯಕ್ಕೆ ಮಕ್ಕಳನ್ನು ಬಳಸುವಂತಿಲ್ಲ. ಹಿಂಸೆ ಮತ್ತು ಯುದ್ಧಗಳ ಪ್ರಭಾವ ಮಕ್ಕಳ ಮೇಲೆ ಆಗದಂತೆ ನೋಡಿಕೊಳ್ಳಬೇಕು.

39. ಮಕ್ಕಳು ಸಶಸ್ತ್ರ ಸಂಘರ್ಷ, ಹಿಂಸೆ, ತಿರಸ್ಕಾರ, ದುರುಪಯೋಗ, ಶೋಷಣೆಗೆ ಒಳಗಾಗಿದ್ದಲ್ಲಿ, ಅವರಿಗೆ ಸೂಕ್ತ ಚಿಕಿತ್ಸೆ, ಆರೈಕೆ, ಸಾಮಾಜಿಕ ಪುನರ್ವಸತಿಯನ್ನು ತಕ್ಷಣವೇ ನೀಡಬೇಕು.

40. ಮಕ್ಕಳು ಕಾನೂನು ಉಲ್ಲಂಘಿಸಿದ್ದ ಪಕ್ಷದಲ್ಲಿ ಅವರ ಗೌರವಕ್ಕೆ ಧಕ್ಕೆಯಾಗದಂತೆ ಅವರ ಮನಃಪರಿವರ್ತನೆಗೆ ಅವಕಾಶ ಮಾಡಿಕೊಡಬೇಕು.

41. ಎಲ್ಲಾ ಮಕ್ಕಳಿಗೂ ಈ ಎಲ್ಲಾ ಹಕ್ಕುಗಳು ಸಿಗಬೇಕು. ಇದಕ್ಕೆ ಯಾವುದೇ ಕಾನೂನು, ಕಾಯಿದೆಗಳೂ ಅಡ್ಡಿಯಾಗಬಾರದು.

42. ಎಲ್ಲಾ ಮಕ್ಕಳಿಗೆ ಹಾಗೂ ವಯಸ್ಕರಿಗೆ ಮಕ್ಕಳ ಹಕ್ಕುಗಳ ಬಗ್ಗೆ ತಿಳಿಸಲು ವ್ಯಾಪಕವಾದ ಪ್ರಚಾರ ಮಾಡುತ್ತಲೇ ಇರಬೇಕು.

43 ರಿಂದ 54. ಮಕ್ಕಳ ಹಕ್ಕುಗಳನ್ನು ಹೇಗೆ ಜಾರಿ ಮಾಡಲಾಗುತ್ತಿದೆ ಎಂಬ ಬಗ್ಗೆ ಸರ್ಕಾರಗಳು ದೇಶದ ನಾಗರಿಕರಿಗೆ, ಮಕ್ಕಳಿಗೆ ಮತ್ತು ವಿಶ್ವಸಂಸ್ಥೆಗೆ ಕಾಲಕಾಲಕ್ಕೆ ವರದಿ ನೀಡುತ್ತಿರಬೇಕು.

ದೇಶದ ನಾಗರಿಕರೂ ಮಕ್ಕಳ ಸ್ಥಿತಿಗತಿ ಕುರಿತು ವಿಶ್ವಸಂಸ್ಥೆಗೆ ವರದಿ ನೀಡಬಹುದು. ಮಕ್ಕಳ ಸ್ಥಿತಿ ಉತ್ತಮಪಡಿಸಲು ಸರ್ಕಾರಗಳು ಅಂತಾರಾಷ್ಟ್ರೀಯ ಸಹಕಾರ ಪಡೆಯಬೇಕು.

ಡಾ। ಲೋಹಿಯಾ ಇಂದಿಗೂ ಪ್ರಸ್ತುತರು

'ಸಮಾಜದಲ್ಲಿನ ಅಸಮಾನತೆ ತೊಲಗದ ಹೊರತು, ಗಾಂಧೀ ತತ್ವಗಳಿಗೆ ಅರ್ಥ ದೊರಕುವುದಿಲ್ಲ; ಭಾರತ ಸೂಪರ್ ಪವರ್ ಕೂಡ ಆಗುವುದಿಲ್ಲ' ಎಂದು ಹಿರಿಯ ಪತ್ರಕರ್ತ ಮತ್ತು ಡಾ। ರಾಮಮನೋಹರ ಲೋಹಿಯಾ ಒಡನಾಡಿ ನವದೆಹಲಿಯ ಮದನ್ ಲಾಲ್ ಹಿಂದ್ ಅವರು ಅಭಿಪ್ರಾಯಪಟ್ಟರು.

ಗಾಂಧೀ ಭವನದಲ್ಲಿ ಡಾ। ರಾಮ ಮನೋಹರ ಲೋಹಿಯಾ ಸಮತಾ ವಿದ್ಯಾಲಯ, ಗಾಂಧೀ ಸ್ಮಾರಕ ನಿಧಿ ಮತ್ತು ಎನ್.ಎಸ್.ಎಸ್. ಕೋಶಗಳ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಿದ್ದ 'ಲೋಹಿಯಾ ನೆನಪು–50 ವರ್ಷ' ಕಾರ್ಯಕ್ರಮವನ್ನು ಅಕ್ಟೋಬರ್ 12ರಂದು ಉದ್ಘಾಟಿಸಿ ಅವರು ಮಾತನಾಡಿದರು.

'ಎಲ್ಲಾ ಮಕ್ಕಳು ಒಂದೇ ರೀತಿಯ ಶಾಲೆಗಳಿಗೆ ಹೋಗಬೇಕು; ಒಂದೇ ರೀತಿಯ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಬೇಕು ಎಂದು ಲೋಹಿಯಾ ಕನಸು ಕಂಡಿದ್ದರು. ಆದರೆ, ಇಂದು ಬಡವರಿಗೆ ಮತ್ತು ಶ್ರೀಮಂತರಿಗೆ ಬೇರೆ ಬೇರೆ ಶಾಲೆಗಳು ಮತ್ತು ಆಸ್ಪತ್ರೆಗಳು ಇವೆ. ಇಂಥ ಕಟು ವಾಸ್ತವವು ಮತ್ತೆ ಮತ್ತೆ ಲೋಹಿಯಾ ಅವರನ್ನು ನೆನಪಿಸಿಕೊಟ್ಟು, ಸಮಾನತೆ ತರಲು ಸಂಘರ್ಷ ನಡೆಸಲು ಉತ್ತೇಜನ ನೀಡುತ್ತದೆ' ಎಂದು ಅವರು ತಿಳಿಸಿದರು.

'ಕರ್ನಾಟಕದಲ್ಲಿ ಲೋಹಿಯಾ ಹೆಜ್ಜೆಗುರುತು' ಕುರಿತು ಪ್ರೊ। ರವಿವರ್ಮ ಕುಮಾರ್, 'ಕರ್ನಾಟಕ ರಾಜಕೀಯದ ಮೇಲೆ ಲೋಹಿಯಾ ಪ್ರಭಾವ' ಕುರಿತು ದಿನೇಶ್ ಅಮೀನ್ ಮಟ್ಟು ಮತ್ತು 'ಲೋಹಿಯಾ ಮತ್ತು ಮಹಿಳೆ' ಕುರಿತು ಇಂದಿರಾ ಕೃಷ್ಣಪ್ಪ ವಿಷಯ ಮಂಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸ್ಮಾರಕ ನಿಧಿಯ ಅಧ್ಯಕ್ಷ ಡಾ। ವೂಡೇ ಪಿ.ಕೃಷ್ಣ ವಹಿಸಿದ್ದರು. ನಿಧಿಯ ಉಪಾಧ್ಯಕ್ಷರಾದ ಪ್ರೊ। ಜಿ.ಬಿ.ಶಿವರಾಜು, ವಿ.ಎನ್.ತಿಪ್ಪನಗೌಡ, ಕಾರ್ಯದರ್ಶಿ ಈ.ಬಸವರಾಜು, ಸಹ ಕಾರ್ಯದರ್ಶಿ ಮಂಗ್ಳೂರ ವಿಜಯ ಮುಂತಾದವರು ಉಪಸ್ಥಿತರಿದ್ದರು.

ನಿವೃತ್ತ ಐ.ಪಿ.ಎಸ್.ಅಧಿಕಾರಿ ಕೆ.ಅರ್ಕೇಶ್ ಪ್ರಾಸ್ತಾವಿಕ ಭಾಷಣ ಮಾಡಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಸದಸ್ಯರ ತ್ರೈಮಾಸಿಕ ಸಭೆ

ದಿನಾಂಕ 22.10.2017ರಂದು ನಡೆದ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಸದಸ್ಯರ ಸಭೆ ಬೆಂಗಳೂರಿನ ಗಾಂಧೀಭವನದಲ್ಲಿ ನಡೆಯಿತು.

ನಿಧಿಯ ಅಧ್ಯಕ್ಷರಾದ ಡಾ: ವೂಡೇ ಪಿ.ಕೃಷ್ಣ ಅಧ್ಯಕ್ಷತೆ ವಹಿಸಿದ್ದರು. ಕೇಂದ್ರ ಗಾಂಧಿ ಸ್ಮಾರಕ ನಿಧಿಯ ಕಾರ್ಯದರ್ಶಿ ಶ್ರೀ ಸಂಜೋಯ್ ಸಿಂಗ್ ವಿಶೇಷ ಆಹ್ವಾನಿತರಾಗಿ ಆಗಮಿಸಿದ್ದರು.

ಸಭೆಯು ಸರ್ವಧರ್ಮ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಉಪಸ್ಥಿತರಿದ್ದ ಎಲ್ಲರನ್ನು ಅಧ್ಯಕ್ಷರು ಸ್ವಾಗತಿಸಿದರು.

ಹಿಂದಿನ ಸಭೆ 04-6-2017ರಂದು ನಡೆದಿತ್ತು. ಅನಂತರ ಅಗಲಿದ ಸಮಾಜವಾದಿ ಚಿಂತಕ, ಹಿರಿಯ ಸಾಹಿತಿ ಶ್ರೀ ವಿ. ಜೆ.. ನಾಯಕ್, ಮಾಜಿ ಮುಖ್ಯಮಂತ್ರಿ ಶ್ರೀ ಧರ್ಮಸಿಂಗ್, ಸ್ವಾತಂತ್ರ್ಯ ಹೋರಾಟಗಾರ ವಿದ್ಯಾಧರ ಗುರೂಜಿ, ಸ್ವಾತಂತ್ರ್ಯ ಹೋರಾಟಗಾರರೂ, ಒಮ್ಮೆ ಗಾಂಧೀಜಿಯನ್ನು ಪ್ರಾಣಾಪಾಯದಿಂದ ಪಾರು ಮಾಡಿದ್ದ ಶ್ರೀ ಭಿಕುದಾಜಿ ಬಿಲಾರೆ, ತುರುವೇಕೆರೆಯ ಸ್ವಾತಂತ್ರ್ಯ ಹೋರಾಟಗಾರ ಶ್ರೀ ಎಚ್. ನರಸಿಂಹಯ್ಯ, ಕರ್ನಾಟಕ ಸರ್ವೋದಯ ಮಂಡಲದ ಅಧ್ಯಕ್ಷರಾಗಿದ್ದ ಗಾಂಧೀವಾದಿ ಶ್ರೀ ಸುರೇಂದ್ರ ಕೌಲಗಿ, ಆನೇಕಲ್ ತಾಲ್ಲೂಕಿನ ಸ್ವಾತಂತ್ರ್ಯ ಹೋರಾಟ ಗಾರ ಶ್ರೀ ಗುರಪ್ಪ ರೆಡ್ಡಿ, ಮಾಜಿ ಶಾಸಕರೂ, ಸ್ವಾತಂತ್ರ್ಯ ಹೋರಾಟಗಾರರೂ ಆಗಿದ್ದ ದಾವಣಗೆರೆಯ ಶ್ರೀ ಕೊಟ್ರಪ್ಪ, ಹಾಸನ ತಾಲ್ಲೂಕು ಶೆಟ್ಟಿಹಳ್ಳಿಯ ಸ್ವಾತಂತ್ರ್ಯ ಹೋರಾಟಗಾರ ಶ್ರೀ ಎಸ್.ಜಿ.ಸಿದ್ದೇಗೌಡ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ರಾಜ್ಯ ಸರ್ಕಾರ ಕೊಡಮಾಡುವ ಪ್ರತಿಷ್ಠಿತ ಗಾಂಧೀ ಸೇವಾ ಪ್ರಶಸ್ತಿಗೆ ಆಯ್ಕೆಯಾದ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಡಾ। ಎಚ್.ಎಸ್.ದೊರೆಸ್ವಾಮಿ ಅವರಿಗೆ ಮತ್ತು ಬೆಂಗಳೂರಿನ ಗಾಂಧೀನಗರ ವಿಧಾನಸಭಾ ಕ್ಷೇತ್ರದ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸರ್ವಾಧ್ಯಕ್ಷರಾಗಿ ಆಯ್ಕೆಯಾಗಿ, ಸಮ್ಮೇಳನಕ್ಕೆ ಅರ್ಥಪೂರ್ಣ ದಿಕ್ಸೂಚಿ ನೀಡಿದ್ದಕ್ಕಾಗಿ ನಿಧಿಯ ಅಧ್ಯಕ್ಷ ಡಾ। ವೂಡೆ ಪಿ.ಕೃಷ್ಣ ಅವರಿಗೆ ಸಭೆಯು ಅಭಿನಂದನೆಯನ್ನು ಸಲ್ಲಿಸಿತು.

ಪ್ರೊ। ಒ. ಅನಂತರಾಮಯ್ಯ ಅವರು ಗಾಂಧೀಜಿ ರಾಜ್ಯಕ್ಕೆ ಭೇಟಿ ನೀಡಿದ ಬಗ್ಗೆ ರಾಜ್ಯ ಪತ್ರಾಗಾರ ಇಲಾಖೆ ಯಿಂದ ಸಮಗ್ರ ಮಾಹಿತಿಯನ್ನು ಸಂಗ್ರಹಿಸುವುದು ಸೂಕ್ತ ಎಂದು ಸೂಚಿಸಿದರು. ಈ ಬಗೆಗಿನ ಎಲ್ಲಾ ಮಾಹಿತಿಯನ್ನು ಪಡೆಯಲು ತಾವು ಸಹಕರಿಸುವುದಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರೂ ರಾಜ್ಯ ಪತ್ರಾಗಾರದ ನಿರ್ದೇಶಕರೂ ಆದ ಶ್ರೀ ಎನ್.ಆರ್.ವಿಶುಕುಮಾರ್ ಭರವಸೆ ನೀಡಿದರು. ದೆಹಲಿಯ ಕಚೇರಿಯಲ್ಲಿ 16000ಕ್ಕೂ ಹೆಚ್ಚು ಛಾಯಾಚಿತ್ರಗಳಿದ್ದು, ಅವುಗಳಲ್ಲಿ ಕರ್ನಾಟಕಕ್ಕೆ ಸಂಬಂಧಿಸಿದ ಚಿತ್ರಗಳನ್ನು ಆಯ್ಕೆ ಮಾಡಿಕೊಂಡು, ಬಳಸಿಕೊಳ್ಳಬಹುದಾಗಿ ಕೇಂದ್ರ ಗಾಂಧೀ ಸ್ಮಾರಕ ನಿಧಿಯ ಕಾರ್ಯದರ್ಶಿ ಸಂಜೊಯ್ ಸಿಂಗ್ ತಿಳಿಸಿದರು.

ಜೂನ್ 2017ರಿಂದ ಅಕ್ಟೋಬರ್ ಎರಡನೇ ವಾರದವರೆಗೆ ಗಾಂಧೀಭವನದ ವತಿಯಿಂದ, ಗಾಂಧೀ ಭವನದ ಸಹಯೋಗದಲ್ಲಿ ನಡೆದ ವಿವಿಧ ಕಾರ್ಯಚಟುವಟಿಕೆಗಳ ಬಗ್ಗೆ ಕಾರ್ಯದರ್ಶಿ ಶ್ರೀ ಬಸವರಾಜು ವಿವರಿಸಿದರು. 'ಗಾಂಧೀ ವಿಚಾರ ಸಂಸ್ಕಾರ ಪರೀಕ್ಷೆ'ಯ ವಿಷಯದಲ್ಲಿ ಸಾಧಿಸಿರುವ ಪ್ರಗತಿಯನ್ನು ಡಾ। ಅಬೀದಾ ಬೇಗಂ ತಿಳಿಸಿದರು. 'ಗಾಂಧೀಜಿ ವಿಚಾರವನ್ನು ಪ್ರಸಾರ ಮಾಡುವ ಜೊತೆಗೆ ಗಾಂಧೀಜಿ ಸೂಚಿಸಿದ ರಚನಾತ್ಮಕ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಬೇಕು; ಅಸ್ಪೃಶ್ಯತೆ, ಅನಕ್ಷರತೆ, ಸ್ವಚ್ಛತೆ ಇತ್ಯಾದಿ ವಿಷಯಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ಪಾದಯಾತ್ರೆ ಸಂಘಟಿಸಬೇಕು; ಗ್ರಾಮೀಣ ಭಾಗದಲ್ಲಿ ವಿಶೇಷ ಉಪನ್ಯಾಸ, ವಿಚಾರ ಸಂಕಿರಣಗಳನ್ನು ನಡೆಸಬೇಕೆಂದು ಪ್ರೊ। ಒ.ಅನಂತರಾಮಯ್ಯನವರು ಸಲಹೆ ಮಾಡಿದರು.

ಮಹಾತ್ಮಾ ಗಾಂಧಿ ಹಾಗೂ ಕಸ್ತೂರಬಾ ಗಾಂಧಿ ಅವರ 150ನೇ ಜನ್ಮ ದಿನೋತ್ಸವ 2018ರ ಅಕ್ಟೋಬರ್

2ರಿಂದ ಪ್ರಾರಂಭವಾಗಲಿದೆ. ಆ ಪ್ರಯುಕ್ತ 150 ಪ್ರಕಟಣೆಗಳನ್ನು ತರುವ ಕಾರ್ಯವನ್ನು ಪ್ರಾರಂಭಿಸಬೇಕು; ಇದಕ್ಕಾಗಿ ಪ್ರಕಟಣಾ ಸಮಿತಿ ರಚಿಸಬೇಕು; ಗಾಂಧೀ ಸ್ಮಾರಕ ನಿಧಿ ಸಹ ಕಾರ್ಯದರ್ಶಿ(ಶೈಕ್ಷಣಿಕ) ಹಾಗೂ ಸಂಚಾಲಕ ಶ್ರೀ ಮಂಗ್ಳೂರ ವಿಜಯ ಅವರಿಗೆ ಈ ಜವಾಬ್ದಾರಿ ನೀಡಲಾಯಿತು. ಯುವಜನರ ಗಮನ ಸೆಳೆಯುವಂಥ ವಿನೂತನ ಕಾರ್ಯಕ್ರಮಗಳನ್ನು ಈ ಸಂದರ್ಭದ ಭಾಗವಾಗಿ ಹಮ್ಮಿಕೊಳ್ಳುವುದು ಸೂಕ್ತ. ಈ ಸಂಬಂಧದಲ್ಲಿ, ಗಾಂಧೀ ಪ್ರಣೀತ ವಿವಿಧ ಸಂಸ್ಥೆಗಳನ್ನು ಗುರುತಿಸಿ, ಅವುಗಳ ಸಹಕಾರ ಪಡೆದುಕೊಳ್ಳಬೇಕೆಂದು ಶ್ರೀ ವಿಶುಕುಮಾರ್ ಸಲಹೆ ನೀಡಿದರು.

ದೇಶದ 12 ರಾಜ್ಯಗಳಲ್ಲಿ 150ನೇ ಜನ್ಮದಿನೋತ್ಸವಕ್ಕಾಗಿ ಸಮಿತಿಗಳು ರಚನೆಗೊಂಡಿವೆ. ಕರ್ನಾಟಕದ ಮೇಲೆ ನಮಗೆ ಹೆಚ್ಚಿನ ವಿಶ್ವಾಸವಿದೆ. ಕೂಡಲೇ ಸಮಿತಿ ರಚಿಸಿ ಕಾರ್ಯೋನ್ಮುಖರಾಗಿ ಎಂದು ಕೇಂದ್ರ ಗಾಂಧಿ ಸ್ಮಾರಕ ನಿಧಿ ಕಾರ್ಯದರ್ಶಿ ಶ್ರೀ ಸಂಜೊಯ್ ಸಿಂಗ್ ಪ್ರೋತ್ಸಾಹದ ನುಡಿಗಳನ್ನು ಆಡಿದರು.

ಶ್ರೀ ಮಂಗ್ಳೂರ ವಿಜಯ ಅವರು ಯುವಜನರನ್ನು ಒಳಗೊಳ್ಳಲು ವಿಶೇಷ ಪ್ರಯತ್ನಗಳನ್ನು ಮಾಡಬೇಕು; ಗಾಂಧಿ ಭವನದ ಗ್ರಂಥಾಲಯದಲ್ಲಿ ಇರುವ ಅಪಾರ ಸಾಹಿತ್ಯವನ್ನು ಅಧ್ಯಯನ ಮಾಡಲು ಆಸಕ್ತಿ ಇರುವವರನ್ನು ಗುರುತಿಸಿ, ಅವರಿಗೆ 'ಫೆಲೋಷಿಪ್' ನೀಡಬೇಕು. ಗಾಂಧೀ ಸಾಹಿತ್ಯ-ಚಿಂತನೆಯಲ್ಲಿ ಆಸಕ್ತಿ ಇರುವ ಕಾಲೇಜು ಅಧ್ಯಾಪಕರನ್ನು ಗುರುತಿಸಿ, ಅವರು ಗಾಂಧೀ ಚಿಂತನೆಯನ್ನು ಪ್ರಸಾರ ಮಾಡುವ ಸಂಪನ್ಮೂಲ ವ್ಯಕ್ತಿಗಳಾಗಿ ರೂಪುಗೊಳ್ಳುವುದು ಮುಖ್ಯ ಎಂದರು. ■

ಕೆಲವು ಮುಖ್ಯ ಶಿಬಿರಗಳು, ವಿಚಾರ ಸಂಕಿರಣಗಳು, ಉಪನ್ಯಾಸಗಳು

ಜುಲೈ ತಿಂಗಳ 29-30ರಂದು ಹಾಸನ ಜಿಲ್ಲೆ ಅರಸೀಕೆರೆಯ ಕಸ್ತೂರಬಾ ಗಾಂಧಿ ಆಶ್ರಮದಲ್ಲಿ 'ಗಾಂಧಿ ಮತ್ತು ಸಮಾಜವಾದ' ಕುರಿತು ಕಾಲೇಜು ಅಧ್ಯಾಪಕರಿಗಾಗಿ ಅಧ್ಯಯನ ಶಿಬಿರವನ್ನು ಕರ್ನಾಟಕ ಗಾಂಧೀ ಸ್ಮಾರಕ ನಿಧಿ, ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನ, ಶಿವಮೊಗ್ಗ ಮತ್ತು ರಾಷ್ಟ್ರೀಯ ಸೇವಾ ಯೋಜನೆ (ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆ) ಇವರ ಸಂಯುಕ್ತ ಆಶ್ರಯದಲ್ಲಿ ನಡೆಸಲಾಯಿತು.

ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಐರೋಪ್ಯ ದೇಶಗಳಲ್ಲಿ ಬೆಳೆದು ನಮ್ಮ ದೇಶದ ಚಿಂತಕರನ್ನೂ, ಸ್ವಾತಂತ್ರ್ಯ ಹೋರಾಟಗಾರರನ್ನೂ ಸಮಾಜವಾದವು ಪ್ರಭಾವಿಸಿತ್ತು. ಆ ಬಗ್ಗೆ ಮಹಾತ್ಮಾ ಗಾಂಧೀಯವರೂ ಕುತೂಹಲ ತಾಳಿದ್ದರು. ಸಮಾಜವಾದ ಒಳಗೊಂಡಿ ರುವ 'ಸಮಾನತೆ' ತತ್ವದಿಂದ ಆಕರ್ಷಿತರಾದ ಗಾಂಧೀಜಿ, ತಮ್ಮನ್ನು 'ಹುಟ್ಟು ಸಮಾಜವಾದಿ' ಎಂದು ಕರೆದುಕೊಂಡರು. ಆ ಮಟ್ಟಿಗೆ ಸಮಾಜವಾದದ ಬಗ್ಗೆ ಅವರು ಆಸಕ್ತಿ ತೋರಿದ್ದರು. ಅಲ್ಲದೆ ಗಾಂಧೀಜಿ ಸಮಾಜವಾದದ ಬಗ್ಗೆ ತಮ್ಮ ಅನುಯಾಯಿ ಗಳಾದ ಜಯಪ್ರಕಾಶ ನಾರಾಯಣ, ರಾಮಮನೋಹರ ಲೋಹಿಯಾ ಮುಂತಾದವರೊಂದಿಗೆ ಸಂವಾದ ನಡೆಸಿ, ಭಾರತೀಯ ಸಮಾಜವಾದ ಎಂಬ ಹೊಸ ರಾಜಕೀಯ ವಿಚಾರಧಾರೆಯ ವಿಕಾಸಕ್ಕೆ ಕಾರಣರಾದರು.

ಸಮಾಜವಾದ ಗಾಂಧಿಯವರ ಸ್ಫೂರ್ತಿಯಲ್ಲಿ ಮೂಡಿದ ಬಗೆ, ಸಮಾಜವಾದದ ಮುಖ್ಯ ಆಶಯಗಳು ಮತ್ತು ಜಾಗತೀಕರಣದ ಇಂದಿನ ದಿನಗಳ ಬಿಕ್ಕಟ್ಟುಗಳನ್ನು ಎದುರಿಸಲು ಗಾಂಧೀಜಿಯ ಸಮಾಜವಾದಿ ಆಶಯಗಳನ್ನು ಹೇಗೆ ಪುನರ್ ಅನ್ವೇಷಿಸಬಹುದು ಎಂಬ ಬಗ್ಗೆ ಮಾತುಕತೆ-ಚರ್ಚೆ ನಡೆಸಲು ಈ ಶಿಬಿರ ಅವಕಾಶ ಒದಗಿಸಿಕೊಟ್ಟಿತು.

ದಿನಾಂಕ 29ರಂದು ಶಿಬಿರವನ್ನು ಹಿರಿಯ ಗಾಂಧೀ ವಾದಿ ಡಾ। ಎಚ್.ಎಸ್.ದೊರೆಸ್ವಾಮಿ ಉದ್ಘಾಟನೆ ಮಾಡಿದರು; ಶಿಬಿರ ಕುರಿತು ಡಿ.ಎಸ್.ನಾಗಭೂಷಣ ಪ್ರಾಸ್ತಾವಿಕ ಮಾತುಗಳನ್ನು ಆಡಿದರು. ಡಾ। ಗಣನಾಥ ಶೆಟ್ಟಿ ಎಕ್ಕಾರು, ರಾಜ್ಯ ಸಂಪರ್ಕಾಧಿಕಾರಿ, ರಾಷ್ಟ್ರೀಯ ಸೇವಾ ಯೋಜನೆ ಇವರು ಮುಖ್ಯ ಅತಿಥಿಗಳಾಗಿ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡರು; ಡಾ। ವೂಡೇ ಪಿ.ಕೃಷ್ಣ, ಅಧ್ಯಕ್ಷರು, ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಇವರು ಅಧ್ಯಕ್ಷತೆ ವಹಿಸಿದ್ದರು.

1ನೇ ಗೋಷ್ಠಿಯಲ್ಲಿ ಶಿಬಿರದ ವಿಷಯ ಪ್ರವೇಶಿಕೆ ಮಾತುಗಳನ್ನು ಡಿ.ಎಸ್.ನಾಗಭೂಷಣ ತಿಳಿಸಿದ ಬಳಿಕ 'ಗಾಂಧಿ ಮತ್ತು ಜೆ.ಪಿ. ಸಂವಾದದಲ್ಲಿ ಮೂಡಿದ ಸಮಾಜ

ವಾದ' ವಿಷಯ ಕುರಿತು ಬೆಂಗಳೂರು ವಿಶ್ವ ವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕರಾದ ಡಾ। ಮೀನಾ ದೇಶಪಾಂಡೆ ಮಾತನಾಡಿದರು.

ಸಂಜೆಯ ಗೋಷ್ಠಿಯಲ್ಲಿ 'ಗಾಂಧಿ-ಲೋಹಿಯಾ ಸಂವಾದದಲ್ಲಿ ಮೂಡಿದ ಸಮಾಜವಾದ' ವಿಷಯದ ಬಗ್ಗೆ ಡಾ। ರಾಜಾರಾಮ್ ತೋಳ್ಪಾಡಿ, ಮಂಗಳೂರು ವಿಶ್ವವಿದ್ಯಾಲಯ ಇವರು ತಮ್ಮ ಚಿಂತನೆಯನ್ನು ಮಂಡಿಸಿದರು. ರಾತ್ರಿ 7ಗಂಟೆಗೆ ಶಿಬಿರಾರ್ಥಿಗಳಿಗೆ 'ಗಾಂಧಿ' ಚಲನ ಚಿತ್ರವನ್ನು ಪ್ರದರ್ಶಿಸಲಾಯಿತು.

ದಿನಾಂಕ 30ರಂದು ಮೊದಲು 'ಗಾಂಧಿ' ಚಲನಚಿತ್ರದ ಬಗ್ಗೆ ಚರ್ಚೆ ನಡೆಯಿತು. ನಂತರ 'ಹಿಂದ್ ಸ್ವರಾಜ್: ಒಂದು ಸಮಾಜವಾದಿ ಓದು' ವಿಷಯ ಕುರಿತು ತುಮಕೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಡಾ। ನಿತ್ಯಾನಂದ ಬಿ. ಶೆಟ್ಟಿ ಅವರು ಅಭಿಮತ ವ್ಯಕ್ತಪಡಿಸಿದರು. ಅಂದು ಮಧ್ಯಾಹ್ನ ಕುವೆಂಪು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ। ರಾಜೇಂದ್ರ ಚೆನ್ನಿ ಅವರು 'ಜಾಗತೀಕರಣ ಮತ್ತು ಗಾಂಧಿ-ಸಮಾಜವಾದಿ ಚಿಂತನೆಗಳು' ಕುರಿತು ಮಾತಾಡಿದರು. ನಂತರ ಶಿಬಿರಾರ್ಥಿಗಳೊಂದಿಗೆ ಪ್ರಶ್ನೋತ್ತರ-ಚರ್ಚೆ ನಡೆಯಿತು.

ಮಧ್ಯಾಹ್ನ ಹಿರಿಯ ಸಮಾಜವಾದಿ ಮತ್ತು ರೈತ ಮುಖಂಡರಾದ ಕಡಿದಾಳು ಶಾಮಣ್ಣ ಅಧ್ಯಕ್ಷತೆ ವಹಿಸಿ, ಕಸ್ತೂರಬಾ ಗಾಂಧಿ ಆಶ್ರಮದ ಸದಸ್ಯರಾದ ಶ್ರೀಮತಿ ಶೋಭಾ ಮೂರ್ತಿ ಮುಖ್ಯ ಅತಿಥಿಯಾಗಿ ಭಾಗಿ ಆಗಿದ್ದ ಸಮಾರೋಪ ಸಮಾರಂಭದಲ್ಲಿ ಶ್ರೀ ಲಕ್ಷ್ಮೀಶ ತೋಳ್‌ಪಾಡಿ ಹಿರಿಯ ಸಂಸ್ಕೃತಿ ಚಿಂತಕರು, ಪುತ್ತೂರು ಇವರು ಸಮಾರೋಪ ನುಡಿಗಳನ್ನು ಆಡಿದರು.

ಪ್ರೊ। ಜಿ. ಬಿ. ಶಿವರಾಜು, ಉಪಾಧ್ಯಕ್ಷರು, ಗಾಂಧಿ ಸ್ಮಾರಕ ನಿಧಿ ಇವರು ಶಿಬಿರದ ಸಂಚಾಲಕರಾಗಿದ್ದರು. ಅವರ ಅಚ್ಚುಕಟ್ಟುತನದಿಂದಾಗಿ ಶಿಬಿರವು ಯಶಸ್ವಿಯಾಗಿ ನಡೆಯಿತು. ಬಳ್ಳಾರಿಯ ಲೋಹಿಯಾ ಪ್ರಕಾಶನ ಮತ್ತು ಅರಸೀಕೆರೆಯ ಕಸ್ತೂರಬಾ ಗಾಂಧಿ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ಶಿಬಿರಕ್ಕೆ ಸಹಕಾರ ನೀಡಿದವು. ■

'ಯುವಜನತೆ: ಗಾಂಧೀ ವಿಚಾರಗಳ ಪ್ರಸ್ತುತತೆ' ಕುರಿತು ರಾಜ್ಯ ಮಟ್ಟದ ವಿಚಾರ ಸಂಕಿರಣ

ಗಾಂಧೀ ಸ್ಮಾರಕ ನಿಧಿ, ರಾಷ್ಟ್ರೀಯ ಸೇವಾ ಯೋಜನೆ ಕೋಶ(ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ), ಗುಳೇದಗುಡ್ಡ (ಬದಾಮಿ ತಾ. ಬಾಗಲಕೋಟೆ ಜಿ.) ಭಂಡಾರಿ ಹಾಗೂ ರಾಠಿ ಕಾಲೇಜಿನ ಮಹಾತ್ಮಾ ಗಾಂಧಿ-ಸ್ವಾಮಿ ವಿವೇಕಾನಂದ ಅಧ್ಯಯನ ಕೇಂದ್ರಗಳ ಸಹಯೋಗದಲ್ಲಿ 'ಯುವಜನತೆ: ಗಾಂಧೀ ವಿಚಾರಗಳ ಪ್ರಸ್ತುತತೆ' ವಿಷಯ ಕುರಿತು ರಾಜ್ಯ ಮಟ್ಟದ ವಿಚಾರ ಸಂಕಿರಣವನ್ನು ಕಾಲೇಜಿನ ಸಾಂಸ್ಕೃತಿಕ ಭವನದಲ್ಲಿ 09.09.2017ರಂದು ನಡೆಸಲಾಯಿತು.

ಗಾಂಧಿ ಸ್ಮಾರಕ ನಿಧಿಯ ಉಪಾಧ್ಯಕ್ಷ ವಿ.ಎನ್.ತಿಪ್ಪನಗೌಡರು ಪ್ರಾಸ್ತಾವಿಕ ಮಾತು ಆಡಿದರು; ಪಿ.ಇ.ಟಿ. ಅಧ್ಯಕ್ಷರಾದ ಕಮಲ್ ಕಿಶೋರಜಿ ಭಂಡಾರಿ ಉದ್ಘಾಟಿಸಿದರು; ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ರಾ.ಸೇ.ಯೋ. ಸಂಯೋಜನಾಧಿಕಾರಿ ಡಾ। ಎಸ್.ಓ.ಹಲಸಗಿ ಮುಖ್ಯತಿಥಿಯಾಗಿದ್ದರು. ಪದವಿ ಕಾಲೇಜಿನ ಅಧ್ಯಕ್ಷರಾದ ರವೀಂದ್ರ ಎಂ.ಪಟ್ಟಣಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಕಾಲೇಜಿನ ಪ್ರಾಂಶುಪಾಲರಾದ ಡಾ। ಕೆ.ಆರ್.ಚೌಕಿಮಠ ಉಪಸ್ಥಿತರಿದ್ದರು.

ಮಧ್ಯಾಹ್ನದ ಗೋಷ್ಠಿಯಲ್ಲಿ 'ಗಾಂಧೀ ಆತ್ಮಕತೆ: ಒಂದು ಮಹಾಕಾವ್ಯ' ವಿಷಯ ಕುರಿತು ತುಮಕೂರು ಬಾಪೂಜಿ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಎಂ. ಬಸವಯ್ಯ ಅವರು ಮಾತನಾಡಿದರು. ಅಧ್ಯಕ್ಷತೆಯನ್ನು ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ। ಎನ್.ವೈ.ಬಡಣ್ಣವರ ವಹಿಸಿದ್ದರು.

ನಂತರದ ಗೋಷ್ಠಿಯಲ್ಲಿ ತುಮಕೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ। ನಿತ್ಯಾನಂದ ಬಿ.ಶೆಟ್ಟಿ ಅವರು 'ಹಿಂದ್ ಸ್ವರಾಜ್:ಒಂದು ಮರುಭೇಟಿ' ವಿಷಯ ಮಂಡಿಸಿದರು. ಕಾಲೇಜಿನ ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ। ವಿ.ಎನ್.ಢಾಣಕ ಶಿರೂರ ಅಧ್ಯಕ್ಷತೆ ವಹಿಸಿದ್ದರು.

ವಿಚಾರ ಸಂಕಿರಣದ ಸಮಾರೋಪ ಭಾಷಣವನ್ನು ಈ.ಬಸವರಾಜು, ಕಾರ್ಯದರ್ಶಿ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಇವರು ಮಾಡಿದರು. ಈ ಸಮಾರಂಭದಲ್ಲಿ ಗಾಂಧಿ ಸ್ಮಾರಕ ನಿಧಿಯ ಸದಸ್ಯರಾದ ಉಮೇಶ ಪಿ.ಬಳಿಗಾರ ಅವರು ಮುಖ್ಯ ಅತಿಥಿಯಾಗಿದ್ದರು. ಇಡೀ ಕಾರ್ಯಕ್ರಮದ ಮೇಲುಸ್ತುವಾರಿಯನ್ನು ಕಾಲೇಜಿನ ಗಾಂಧೀ ಅಧ್ಯಯನ ಕೇಂದ್ರದ ಡಾ। ಎಂ.ಎಸ್.ಪಾಟೀಲ ವಹಿಸಿಕೊಂಡು, ಯಶಸ್ವಿಗೊಳಿಸಿದರು. ■



ಮಹಾತ್ಮ ಗಾಂಧಿ ಶಾಂತಿ ಪುರಸ್ಕಾರ

ಗಾಂಧೀಜಿಯವರ 149ನೇ ಜನ್ಮದಿನದಂದು, ಅವರ ತತ್ವಾದರ್ಶಗಳನ್ನು ಪಾಲಿಸುವ ಬಗ್ಗೆ ಧೃಡ ಸಂಕಲ್ಪ ಕೈಗೊಳ್ಳುವುದು ಮುಖ್ಯ. ಈ ರೀತಿಯಲ್ಲೇ ಅವರ ಜನ್ಮದಿನಾಚರಣೆ ಆಚರಿಸುವುದು ಉತ್ತಮ ಎಂದು ಹಿರಿಯ ಸ್ವಾತಂತ್ರ್ಯಯೋಧ ಡಾ॥ ಎಚ್.ಎಸ್.ದೊರೆಸ್ವಾಮಿ ಅವರು ಕರೆ ನೀಡಿದರು.

ಸ್ವರಾಜ್ಯ ಎಂದರೆ 'ನಮ್ಮ ಮೇಲೇ ನಾವು ಹತೋಟಿ ಹೊಂದುವುದು' ಎಂದರ್ಥ. ಇಂದು ಬಹಳಷ್ಟು ಜನರು ತಮ್ಮ ಮೇಲೆ ಹತೋಟಿ ಕಳೆದುಕೊಂಡಿರುವುದು ಕಂಡು ಬರುತ್ತದೆ. ಕೋರ್ಟುಗಳು, ಪೊಲೀಸ್ ಠಾಣೆಗಳು, ಆಸ್ಪತ್ರೆಗಳು ಹೆಚ್ಚುತ್ತಿರುವುದು ಪ್ರಗತಿ ಅಲ್ಲ. ಇವುಗಳು ಕಡಿಮೆಯಾದರೇನೆ ಒಂದು ಸಮಾಜ ನಿಜವಾದ ಪ್ರಗತಿಯನ್ನು ಹೊಂದಬಲ್ಲದು ಎಂದು ಅವರು ಮಾರ್ಮಿಕವಾಗಿ ತಿಳಿಸಿದರು.

ಮಕ್ಕಳಲ್ಲಿ ಉತ್ತಮ ಮೌಲ್ಯಗಳನ್ನು ತರುವಲ್ಲಿ ಶಿಕ್ಷಣ ಇಲಾಖೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕು. ಸಮಾಜ ಸೇವಾ ಸಂಸ್ಥೆಗಳು ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು ಎಂದು ಅವರು ಹಿತವಚನ ನೀಡಿದರು.

ದೊರೆಸ್ವಾಮಿ ಕುರಿತು ಮುಖ್ಯಮಂತ್ರಿ ಸಿದ್ಧರಾಮಯ್ಯ

ಗಾಂಧೀಜಿಯವರು ಸರಳ ಜೀವನ ನಡೆಸಿಯೇ, ಪ್ರೀತಿ, ಸೋದರತ್ವ, ಅನುಕಂಪ, ಸತ್ಯ ಹಾಗೂ ಅಹಿಂಸೆ ಎಂಬ ಪಂಚಸೂತ್ರವನ್ನು ಅನುಸರಿಸಿದರು. ಇಂದಿಗೂ ಈ ತತ್ವಗಳು ಅನುಕರಣೀಯವಾಗಿವೆ. ಮಹಾತ್ಮಾ ಗಾಂಧೀಜಿ ದಾರಿಯಲ್ಲೇ ಡಾ॥ ಎಚ್.ಎಸ್.ದೊರೆಸ್ವಾಮಿ ಅವರು ನಡೆದುಕೊಂಡು ಬಂದಿದ್ದಾರೆ. ಅವರು ಎಂದಿಗೂ ತಮ್ಮ ಗುರಿಯನ್ನು ಬದಲಿಸಿಲ್ಲ. ಸರ್ಕಾರದ ವಿರುದ್ಧವೂ ಅವರು ಗುಡುಗುತ್ತಾರೆ; ಅವರಿಗೆ ಒಟ್ಟಾರೆ ಬೇಕಿರುವುದು ನ್ಯಾಯ ಮತ್ತು ಶಾಂತಿ. ಇದಕ್ಕೆ ಸರ್ಕಾರ ಕೂಡ ಬದ್ಧವಾಗಿದೆ.

ಗಾಂಧೀಜಿಯವರನ್ನು ಕೊಂದ ಮತಾಂಧ ಶಕ್ತಿಗಳು ಇನ್ನೂ ಸಮಾಜದಲ್ಲಿ ಹಾವಳಿ ನಡೆಸಿವೆ. ಮನುಷ್ಯರ ನಡುವೆ ಯಾವುದೇ ರೀತಿಯ ಗೋಡೆ ನಿರ್ಮಿಸುವುದು ಇಂಥ ಶಕ್ತಿಗಳ ಹುನ್ನಾರ. ಇವುಗಳಿಗೆ ಜನತೆ ತಕ್ಕ ಉತ್ತರ ನೀಡಬೇಕು. ಗಾಂಧೀಜಿಯವರ ತತ್ವಾದರ್ಶಗಳನ್ನು ನಾವು ಅನುಸರಿಸಿದರೆ, ಜಾತೀಯ ಮತೀಯ ಶಕ್ತಿಗಳ ಶಕ್ತಿ ಕಡಿಮೆಯಾಗಿಬಿಡುತ್ತದೆ.

ಧರ್ಮವನ್ನು ರಾಜಕೀಯಕ್ಕೆ ಬೆರೆಸುವುದು ಸಮಂಜಸವಲ್ಲ; ಚುನಾವಣೆಯ ಸಮಯದಲ್ಲಿ ಮತದಾರರಿಗೆ ಹಣ, ಹೆಂಡ ಇತ್ಯಾದಿಗಳನ್ನು ಹಂಚುವುದು ಅನ್ಯಾಯ. ಕಾನೂನು ಪ್ರಕಾರವೂ ಇದು ಅಕ್ರಮ. ಪ್ರಾಮಾಣಿಕರು ಮತ್ತು ಸತ್ಯನಿಷ್ಠೆಯಿಂದ ಸಮಾಜ ಸೇವೆ ಮಾಡಲು ಬಯಸುವವರು ರಾಜಕೀಯಕ್ಕೆ ಬರಬೇಕು; ಜನರೂ ಇಂಥವರನ್ನು ಬೆಂಬಲಿಸಬೇಕು; ಆಗಲೇ ಉತ್ತಮ ಆಡಳಿತ ದೊರಕಲು ಸಾಧ್ಯ ಎಂದು ಅವರು ಕಿವಿಮಾತು ಹೇಳಿದರು.

ಹಿಂಸೆ ಹಾಗೂ ಅಸಹಿಷ್ಣುತೆಯಿಂದ ದ್ವೇಷ ಬೆಳೆಯುತ್ತದೆ; ಇವುಗಳಿಂದ ಆಡಳಿತಗಾರರು ಮತ್ತು ಜನರು ಸದಾ ದೂರ ಇರಬೇಕು; ಯಾರ ವಿರುದ್ಧವೂ ದ್ವೇಷದ ಮಾತು ಮತ್ತು ಕೃತಿಗಳಲ್ಲಿ ತೊಡಗಬಾರದು. ರಾಜಕೀಯ ಕ್ಷೇತ್ರದಲ್ಲಿ ಹಿಂಸಾ ಪ್ರವೃತ್ತಿ ವ್ಯಾಪಕವಾಗಿ ಮತ್ತು ವ್ಯವಸ್ಥಿತವಾಗಿ ನಡೆದಿದೆ. ಆಡಳಿತವು ನ್ಯಾಯದ ಪರ ಇರಬೇಕು. ಸರ್ಕಾರ ತನ್ನ ಗೌರವಕ್ಕೆ ಚ್ಯುತಿ ತಂದುಕೊಳ್ಳುವ ಮಟ್ಟಕ್ಕೆ ಖಂಡಿತ ಹೋಗಬಾರದು ಎಂದು ಅವರು ಸಲಹೆ ನೀಡಿದರು. ■

108 ವರ್ಷಗಳ ಹಿಂದಿನ ಒಂದು ಪತ್ರ

ಇಂದಿಗೂ ಮಾರ್ಗದರ್ಶಿ

108 ವರ್ಷಗಳ ಹಿಂದೆ ಸಾಹಿಬ್‌ಗಂಜ್‌ನ ಒಬ್ಬರು ಬರೆದ ಪತ್ರ ಇಂದಿಗೂ ನಮಗೆ ಮಾರ್ಗದರ್ಶಿಯಾಗಿದೆ ಎಂದರೆ ಅತಿಶಯೋಕ್ತಿ ಆಗುವುದಿಲ್ಲ.

ವ್ಯವಸ್ಥೆಯಲ್ಲಿ ಯಾವುದೇ ಅನಾನುಕೂಲವನ್ನು, ತೊಂದರೆಯನ್ನು ನಾವು ಎದುರಿಸಿದಾಗ, ಆ ಬಗ್ಗೆ ಗೊಣಗುತ್ತೇವೆ; ಅಕ್ಕ-ಪಕ್ಕದವರ ಜೊತೆಗೆ ಮಾತನಾಡುತ್ತೇವೆ; 'ಇಲ್ಲಿ ಎಲ್ಲವೂ ಅಧ್ವಾನ' ಎಂಬ ಬೀಸು ಮಾತನ್ನು ಆಡಿ ಬಿಡುತ್ತೇವೆ.

ಆದರೆ, ಆ ಅನಾನುಕೂಲ ಅಥವಾ ತೊಂದರೆಯ ಬಗ್ಗೆ ನಾವು ಆಳವಾಗಿ ಯೋಚಿಸುವುದಿಲ್ಲ; ಚರ್ಚಿಸುವುದಿಲ್ಲ. ಆ ಅನಾನುಕೂಲ ಅಥವಾ ತೊಂದರೆ ಏಕೆ ಆಯಿತು? ಅದನ್ನು ಯಾರು ಬಗೆಹರಿಸಬಲ್ಲರು? ಅವರನ್ನು ಸಂಪರ್ಕಿಸಿ, ನಮಗೆ ಆದ ಅನಾನುಕೂಲ ಅಥವಾ ತೊಂದರೆಯನ್ನು ತಿಳಿಸಬೇಕಲ್ಲವೆ? ಎಂಬ ಮೂಲ ಪ್ರಶ್ನೆಯನ್ನು ನಾವು ಹಾಕಿಕೊಳ್ಳುವುದಿಲ್ಲ. ಹಾಗಾಗಿ, ನಮಗೆ ಆಗಿದ್ದ ಅನಾನುಕೂಲ ಅಥವಾ ತೊಂದರೆ, ಇನ್ನೊಬ್ಬರಿಗೆ ಅಥವಾ ನಮಗೇ ಆಗುತ್ತಾ ಹೋಗುತ್ತದೆ.

108 ವರ್ಷಗಳ ಹಿಂದೆ ಇಲ್ಲಿ ಬ್ರಿಟಿಷ್ ಆಡಳಿತ ಇತ್ತು. ಆಗ ಸಾಹಿಬ್‌ಗಂಜ್ ಭಾಗದಲ್ಲಿ ರೈಲುಪ್ರಯಾಣ ಕೈಗೊಂಡ ಓಖಿಲ್ ಚಂದ್ರ ಸೇನ್ ಎಂಬವರು ತಮಗೆ ಆದ ತೊಂದರೆಯನ್ನು ಅಧಿಕಾರಿಗಳ ಗಮನಕ್ಕೆ ತರುವ ಚರಿತ್ರಾರ್ಹ ನಿರ್ಧಾರ ಮಾಡಿದರು. ಅನಂತರವೇ ರೈಲುಗಳಲ್ಲಿ ಶೌಚಾಲಯಗಳ ಏರ್ಪಾಟು ಮಾಡಿದರು. ತಮ್ಮ ತೊಂದರೆಯ ಬಗ್ಗೆ ಸಂಬಂಧಿಸಿದವರಿಗೆ ಓಖಿಲ್ ಚಂದ್ ಪತ್ರ ಬರೆದರು. ಅದರಿಂದಾಗಿ, ಮುಂದಿನ ದಶಕಗಳಲ್ಲಿ ಅನೇಕರಿಗೆ, ಇಂದಿಗೂ ನಮಗೆ, ಅನುಕೂಲವಾಗುತ್ತಿದೆ.

ಪಕ್ಕದಲ್ಲಿರುವ ಪತ್ರವನ್ನು ಓದಿ; ಇದನ್ನು ನೋಡಿದರೇನೆ ಓಖಿಲ್ ಚಂದ್ರ ಸೇನ್ ಅವರಿಗೆ ಇಂಗ್ಲೀಷ್ ವ್ಯಾಕರಣ ಬರುತ್ತಿರಲಿಲ್ಲ ಎಂಬುದು ತಂತಾನೆ ತಿಳಿಯುತ್ತದೆ. ಆದರೆ ಅವರ ಧೃಡ ನಿರ್ಧಾರ ಇಂದಿಗೂ ನಾವು ಅನುಕರಣೆ ಮಾಡಲು ಯೋಗ್ಯವಾಗಿರುವಂಥದ್ದು.

ನಮಗೆ ಏನಾದರೂ ಅನಾನುಕೂಲ, ತೊಂದರೆ ಆದರೆ ನಾವು ಆಗಲೇ ಸಂಬಂಧಪಟ್ಟವರಿಗೆ ಪತ್ರ ಬರೆದು ತಿಳಿಸಿ, ಅದನ್ನು ನಿವಾರಿಸಲು ಕೋರಿಕೆ ಸಲ್ಲಿಸುವುದು ಅತ್ಯಗತ್ಯ ಎಂಬುದು ನಮಗೆ ಈ ಪತ್ರದಿಂದ ಮನವರಿಕೆ ಆಗುತ್ತದೆ. ಅಲ್ಲವೆ? ■

Date: 02 - 07 - 1909

Divisional Railway Officer,
Sahibgunj,

Respected Sirs,

I am arrive by passenger train Ahmedpur station and my belly is too much swelling with jackfruit. I am therefore went to privy. Just I doing the nuisance that guard making whistle blow or train to go off and I am running with lotaah in one hand and dhoti in the next when I am fall over and expose all my shocking to man and female women on platform. I am got leaved at Ahmedpur station. This too much bad, if passenger go to make dung that dam guard not wait train five minutes for him. I am therefore pray your honour to make big fine on that guard for public sake. Otherwise I am making big report to papers.

Your faithful Servant,
Okhil Chandra Sen

ಯುವಜನ ಮತ್ತು ಗಾಂಧೀ ವಿಚಾರ

ರಾಷ್ಟ್ರೀಯ ಸೇವಾ ಯೋಜನೆಯ (ಎನ್‌ಎಸ್ ಎಸ್) ಅನೇಕ ಅಂಶಗಳು ಗಾಂಧೀಜಿ ವಿಚಾರಧಾರೆಯ ಆಧಾರವನ್ನೇ ಹೊಂದಿವೆ. ಶಿಸ್ತು, ಸಹನೆ, ಪರಿಶ್ರಮ, ರಾಷ್ಟ್ರಪ್ರೇಮ, ಸೇವಾ ಮನೋಭಾವ, ಸರಳ ಜೀವನ ಇತ್ಯಾದಿಗಳನ್ನು ಎಲ್ಲಾ ಎನ್.ಎಸ್.ಎಸ್. ಬೆಳೆಸುತ್ತದೆ.

ಎನ್.ಎಸ್.ಎಸ್. ಯುವಜನರಿಗೆ ಗಾಂಧೀಜಿ ತತ್ವಗಳನ್ನು ಮನಗಾಣಿಸಿಕೊಡುವ ಅನೇಕ ಕಾರ್ಯಕ್ರಮಗಳು ರಾಜ್ಯದ ಉದ್ದಕ್ಕೂ ನಿರಂತರವಾಗಿ ನಡೆದುಕೊಂಡು ಬಂದಿವೆ.

ಇಂಥ ಒಂದು ಕಾರ್ಯಕ್ರಮ ಮಂಡ್ಯ ಜಿಲ್ಲೆ ಪಾಂಡವಪುರದಲ್ಲಿ ದಿನಾಂಕ 18–9–2017ರಂದು ಅಲ್ಲಿನ ಸರ್ಕಾರಿ ಪ.ಪೂ.ಕಾಲೇಜಿನಲ್ಲಿ ನಡೆಯಿತು. ಇದು, ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ರಾಷ್ಟ್ರೀಯ ಸೇವಾ ಯೋಜನೆ ಘಟಕ, ಸರ್ಕಾರಿ ಪ.ಪೂ.ಕಾಲೇಜು, ಪಾಂಡವ ಪುರ ಮತ್ತು ಎನ್.ಎಸ್.ಎಸ್.ಯೋಜನೆ ಕೋಶ(ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆ) ಇವರ ಜಂಟಿ ಆಶ್ರಯದಲ್ಲಿ ಏರ್ಪಾಟಾಗಿತ್ತು.

ಕಾರ್ಯಾಗಾರದ ಪ್ರಾರಂಭದಲ್ಲಿ ಗಾಂಧೀ ಸ್ಮಾರಕ ನಿಧಿಯ ಕಾರ್ಯದರ್ಶಿ ಈ.ಬಸವರಾಜು ಪ್ರಾಸ್ತಾವಿಕ ಮಾತುಗಳನ್ನು ಆಡಿದರು. ಕಾರ್ಯಾಗಾರವನ್ನು ಹಿರಿಯ ಸಂಸ್ಕೃತಿ ಚಿಂತಕರಾದ ಪ.ಮಲ್ಲೇಶ್ ಅವರು ಉದ್ಘಾಟಿಸಿದರು. ಮಂಡ್ಯ ಪ.ಪೂ.ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಕೃಷ್ಣ ಅವರು ಕಳಿಸಿದ್ದ ಶುಭಾಶಯವನ್ನು ಓದಲಾಯಿತು. ಮೈಸೂರು ವಿಶ್ವವಿದ್ಯಾಲಯದ ಡಾ॥ಬಂದ್ರಶೇಖರ್, ಕಾಲೇಜು ಅಭಿವೃದ್ಧಿ ಸಮಿತಿಯ ಅಧ್ಯಕ್ಷ ವೈ.ಆರ್. ಪುರುಷೋತ್ತಮ್ ಮುಖ್ಯ ಅತಿಥಿಗಳಾಗಿದ್ದರು. ಅಧ್ಯಕ್ಷತೆಯನ್ನು ಮೇಲುಕೋಟೆ ಶಾಸಕ ಕೆ.ಎಸ್.ಪುಟ್ಟಣ್ಣಯ್ಯ ವಹಿಸಿದ್ದರು. ಕಾಲೇಜಿನ ಪ್ರಿನ್ಸಿಪಾಲ್ ಪ್ರೊ॥ಎಸ್.ಚಿದಂಬರ್ ಉಪಸ್ಥಿತರಿದ್ದರು.

ಮೊದಲನೇ ಗೋಷ್ಠಿಯಲ್ಲಿ ಮೈಸೂರು ವಿಶ್ವವಿದ್ಯಾಲಯದ ಗಾಂಧಿ ಅಧ್ಯಯನ ಕೇಂದ್ರದ ನಿರ್ದೇಶಕ ಪ್ರೊ॥ ಶಿವನಂಜಪ್ಪ 'ವರ್ತಮಾನದಲ್ಲಿ ಗಾಂಧಿ' ವಿಷಯ ಕುರಿತು ಮಾತನಾಡಿದರು. ಗೋಷ್ಠಿಯ ಅಧ್ಯಕ್ಷತೆಯನ್ನು ಪ್ರೊ॥ ಎಸ್.ಚಿದಂಬರ್ ವಹಿಸಿದ್ದರು. ನಂತರದ ಗೋಷ್ಠಿಯಲ್ಲಿ ಮೈಸೂರಿನ ಎನ್.ಐ.ಇ.ಪ್ರಥಮ ದರ್ಜೆ ಕಾಲೇಜ್ ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕ ಪ್ರೊ॥ ಭೀಮರಾಜು 'ಗಾಂಧಿ ಚಿಂತನೆಗಳ ಸರ್ವಕಾಲೀನ ಶ್ರೇಷ್ಠತೆ' ವಿಷಯ ಮಂಡಿಸಿದರು. ಈ ಗೋಷ್ಠಿಯ ಅಧ್ಯಕ್ಷತೆಯನ್ನು ಪಿ.ಇ.ಎಸ್. ಬಾಲಕಿಯರ ಪ.ಪೂ. ಕಾಲೇಜಿನ ಸಹಾಯಕ ಪ್ರಾಂಶುಪಾಲ ಎಚ್. ರಮೇಶ್ ವಹಿಸಿದ್ದರು.

ಕಾರ್ಯಾಗಾರದ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಪಾಂಡವಪುರ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್‌ನ ಎಂ.ರಮೇಶ್ ವಹಿಸಿದ್ದು, ಸಮಾರೋಪ ಭಾಷಣವನ್ನು ವಿಜಯ ಪ್ರ.ದ.ಕಾಲೇಜಿನ ನಿವೃತ್ತ ಪ್ರಾಂಶುಪಾಲ ಪ್ರೊ॥ ಬಿ.ನಾರಾಯಣಗೌಡ ಅವರು ಮಾಡಿದರು. ಮುಖ್ಯ ಅತಿಥಿಯಾಗಿ ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಪಿ.ಎಸ್.ಉಮಾಶಂಕರ್ ಭಾಗಿ ಆಗಿದ್ದರು.

ಗ್ರಾಮ ಸ್ವರಾಜ್ಯದ ಕನಸು ಕುರಿತು ಅಧ್ಯಯನ ಶಿಬಿರ

ಗಾಂಧೀಜಿ ಕಂಡ ಗ್ರಾಮಸ್ವರಾಜ್ಯದ ಕನಸು ಏನಿತ್ತು ಎಂಬ ಬಗ್ಗೆ ಇಂದಿನ ವಿದ್ಯಾರ್ಥಿ–ಯುವಜನರಿಗೆ ಮಾಹಿತಿ ಇರುವುದು ಅತ್ಯವಶ್ಯ. ಆ ಕನಸಿನ ಆಧಾರವನ್ನು ಕೆದರಿ ನೋಡುವುದು ಕುತೂಹಲಕಾರಿ. ಅಂದಿನ ಮೂಲ ತತ್ವಕ್ಕೆ ಇಂದು ಅಗತ್ಯವಾಗಬಹುದಾದುದನ್ನು ಸೇರ್ಪಡೆ ಮಾಡಿ, ಹೊಸ ಆರೋಗ್ಯಕರ ಸಮಾಜವನ್ನು ನಿರ್ಮಾಣ ಮಾಡುವ ಕನಸು ನಮ್ಮ ವಿದ್ಯಾರ್ಥಿ–ಯುವಜನರನ್ನು ಕಾಡುವಂಥದ್ದು.

ಈ ಹಿನ್ನೆಲೆಯಲ್ಲಿ ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನ, ಶಿವಮೊಗ್ಗ, ರಾಷ್ಟ್ರೀಯ ಸೇವಾ ಯೋಜನೆ, ಮೈಸೂರು ವಿಶ್ವವಿದ್ಯಾಲಯ ಮತ್ತು ಮೈಸೂರಿನ ಸಿದ್ಧಾರ್ಥನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಂಯುಕ್ತಾಶ್ರಯದಲ್ಲಿ ಒಂದು ಅಧ್ಯಯನ ಶಿಬಿರವು ಗಮನ ಸೆಳೆಯುವಂತಿತ್ತು.

ಉದ್ಘಾಟನೆಯನ್ನು ಚಾಮರಾಜನಗರ ದೀನ ಬಂಧು ಅನಾಥಾಶ್ರಮದ ಗೌ.ಕಾರ್ಯದರ್ಶಿ ಜಿ.ಎಸ್. ಜಯದೇವ ಮಾಡಿದರು; ಆಶಯ ನುಡಿಗಳನ್ನು ಲೋಹಿಯಾ ಜನ್ಮ ಶತಾಬ್ದಿ ಪ್ರತಿಷ್ಠಾನದ ಅಧ್ಯಕ್ಷರಾದ ಡಿ.ಎಸ್.ನಾಗಭೂಷಣ ಆಡಿದರು. ಅಧ್ಯಕ್ಷತೆಯನ್ನು ಗಾಂಧಿ ಸ್ಮಾರಕ ನಿಧಿಯ ಉಪಾಧ್ಯಕ್ಷ ಪ್ರೊ॥ ಜಿ.ಬಿ.ಶಿವರಾಜು ವಹಿಸಿದ್ದರು.

ಒಂದನೇ ಗೋಷ್ಠಿಯಲ್ಲಿ 'ನಮ್ಮ ಗ್ರಾಮಗಳು ಎಷ್ಟು ಸ್ವಾಯತ್ತ?' ಕುರಿತು ಬೆಂಗಳೂರಿನ ಡಾ॥ ರಾಜೇಗೌಡ ಹೊಸಹಳ್ಳಿ ಮಾತನಾಡಿದರು; ಎರಡನೇ ಗೋಷ್ಠಿಯಲ್ಲಿ 'ಗ್ರಾಮ ಸ್ವರಾಜ್ಯಕ್ಕಾಗಿ ಮಹಿಳಾ ಸ್ವಾಯತ್ತತೆ' ವಿಷಯವನ್ನು ಬಗ್ಗೆ ಧಾರವಾಡದ ಶಾರದಾ ಗೋಪಾಲ ಅವರು

ಮಂಡಿಸಿದರು. ಮೂರನೇ ಗೋಷ್ಠಿಯಲ್ಲಿ 'ಗ್ರಾಮೀಣ ಹಣಕಾಸು: ಸ್ವಾಯತ್ತತೆಯ ಸಾಧ್ಯಾಸಾಧ್ಯತೆಗಳು' ವಿಷಯದ ಬಗ್ಗೆ ಬೆಂಗಳೂರಿನ ಐ.ಐ.ಎಂ. ಪ್ರಾಧ್ಯಾಪಕ ಪ್ರೊ.ಎಂ.ಎಸ್. ಶ್ರೀರಾಮ್ ವಿಚಾರ ಮಂಡಿಸಿದರು.

ವಿದ್ಯಾರ್ಥಿಗಳೇ 'ನಾವೇನು ಮಾಡಬಹುದು?' ಎಂಬ ಬಗ್ಗೆ ಗುಂಪು ಚರ್ಚೆ ನಡೆಸಿದರು. ಸಮಾರೋಪ ನುಡಿಗಳನ್ನಾಡಿದ್ದು ಮೈಸೂರು ವಿಶ್ವವಿದ್ಯಾಲಯದ ಎನ್.ಎಸ್.ಎಸ್.ನ ಡಾ। ಬಿ.ಚಂದ್ರಶೇಖರ್ ಅವರು. ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲ ಪ್ರೊ। ಎಚ್.ಇ.ದಿವಾಕರ್ ವಹಿಸಿದ್ದರು.

ಶಿಬಿರಾರ್ಥಿಗಳಲ್ಲಿ ಶಿಸ್ತು, ಸಮಯಪ್ರಜ್ಞೆ, ವಿಚಾರ ವಂತಿಕೆ ಬೆಳೆಯುವುದಕ್ಕೆ ಕಾಲೇಜಿನ ಎನ್. ಎಸ್.ಎಸ್. ಕಾರ್ಯಕ್ರಮಾಧಿಕಾರಿ ಕೆ.ಎಂ.ಪ್ರಸನ್ನಕುಮಾರ್ ಅವರ ಪರಿಶ್ರಮ ಅಪಾರ ಎಂಬುದು ಎದ್ದು ಕಾಣುತ್ತಿತ್ತು. ಅಧ್ಯಯನ ಶಿಬಿರಕ್ಕೆ ಮೈಸೂರಿನ ಮಾಜಿ ಶಾಸಕರಾದ ವೈ.ಮಹೇಶ್ ಸಹಕಾರ ನೀಡಿದ್ದರು.

ಬೆಂಗಳೂರಿನಲ್ಲಿ ಕಾರ್ಯಾಗಾರ

ಬನಶಂಕರಿ, 3ನೇ ಹಂತದಲ್ಲಿರುವ ಐ.ಟಿ.ಐ. ಬಡಾವಣೆಯ ಶ್ರೀ ಕೃಷ್ಣ ಪದವಿ ಕಾಲೇಜಿನ ಸಭಾಂಗಣದಲ್ಲಿ 26 ಸೆಪ್ಟೆಂಬರ್ 2017ರಂದು 'ಗಾಂಧಿ ವಿಚಾರ' ಕುರಿತು ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು.

ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಡಾ। ಎಚ್. ಎಸ್. ದೊರೆಸ್ವಾಮಿ, ಶಾಸಕ ರವಿ ಸುಬ್ರಹ್ಮಣ್ಯ, ಎನ್.ಎಸ್.ಎಸ್. ಕೋಶದ ರಾಜ್ಯ ಸಂಪರ್ಕಾಧಿಕಾರಿ ಡಾ। ಗಣನಾಥ ಶೆಟ್ಟಿ ಎಕ್ಕಾರು ಮತ್ತು ಬೆಂಗಳೂರು ವಿಶ್ವವಿದ್ಯಾಲಯದ ಎನ್.ಎಸ್.ಎಸ್. ಸಂಯೋಜನಾಧಿಕಾರಿ ಡಾ।ಶ್ರೀನಿವಾಸ್ ಮುಖ್ಯ ಅತಿಥಿಯಾಗಿದ್ದರು.

ಸಂಪನ್ಮೂಲ ವ್ಯಕ್ತಿಗಳಾಗಿ ಗಾಂಧೀ ಸ್ಮಾರಕ ನಿಧಿ ಸಹ ಕಾರ್ಯದರ್ಶಿ ಮಂಗ್ಳೂರ ವಿಜಯ ಮತ್ತು ಗಾಂಧೀ ತತ್ವ ಚಿಂತಕರಾದ ಡಾ। ಲೀಲಾ ಅಪ್ಪಾಜಿ ಅವರು ಭಾಗಿ ಆಗಿದ್ದರು. ಅಧ್ಯಕ್ಷತೆಯನ್ನು ಲಾರ್ಡ್ ಶ್ರೀಕೃಷ್ಣ ಇಂಟರ್ ನ್ಯಾಷನಲ್ ಎಜುಕೇಷನ್ ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷ ಡಾ। ಎಂ.ರುಕ್ಮಾಂಗದ ನಾಯ್ಡು ವಹಿಸಿದ್ದರು.

ಸಭೆಯಲ್ಲಿ ಗಾಂಧೀ ಸ್ಮಾರಕ ನಿಧಿ ಕಾರ್ಯದರ್ಶಿ ಈ.ಬಸವರಾಜು ಪ್ರಾಸ್ತಾವಿಕ ಮಾತುಗಳನ್ನು ಆಡಿದರು. ಕಾಲೇಜಿನ ಪ್ರಾಂಶುಪಾಲರಾದ ಸರಸ್ವತಿ ಕುಂಬಾಳೆ ಮತ್ತು ಎನ್.ಎಸ್.ಎಸ್. ಕಾರ್ಯಕ್ರಮಾಧಿಕಾರಿ ಡಾ। ಪೂರ್ಣಿಮಾ ಜೋಗಿ ಉಪಸ್ಥಿತರಿದ್ದರು. ಕಾಲೇಜಿನ ಇಂಗ್ಲೀಷ್ ಪ್ರಾಧ್ಯಾಪಕರಾದ ಕವಿತಾ ವೇಣುಗೋಪಾಲ್ ವಂದನೆ ಅರ್ಪಿಸಿದರು.

ಗಾಂಧೀ ಭವನದೆಡೆಗೆ ನಡಿಗೆ

17–10–2017ರಂದು ಬೆಂಗಳೂರಿನ ಶೇಷಾದ್ರಿ ಪುರಂ ಕಾಲೇಜಿನ 39 ಎಂ.ಕಾಂ. ವಿದ್ಯಾರ್ಥಿಗಳು ಪ್ರಾಧ್ಯಾಪಕಿ ಡಾ। ಪಂಪಾದೇವಿ ಅವರೊಂದಿಗೆ ಗಾಂಧೀ ಭವನಕ್ಕೆ ಆಗಮಿಸಿದರು. ಮೊದಲು ಶ್ರಮದಾನ ಮಾಡಿದ ಅವರು ನಂತರ ಗಾಂಧಿ ಸಾಕ್ಷ್ಯಚಿತ್ರ ವೀಕ್ಷಿಸಿದರು. ಬಳಿಕ ಸ್ಮಾರಕ ನಿಧಿಯ ಸಹ ಕಾರ್ಯದರ್ಶಿ ಮಂಗ್ಳೂರ ವಿಜಯ ಅವರೊಂದಿಗೆ ಸಂವಾದ ನಡೆಸಿದರು.

ಶಾಂತಿ–ಸೌಹಾರ್ದ ಸಾಕಾರಗೊಳ್ಳುವುದು ಗಾಂಧೀಜಿ ತೋರಿದ ದಾರಿಯಲ್ಲೇ

ಪ್ರಸ್ತುತ ಸಮಾಜದಲ್ಲಿ ಶಾಂತಿ, ಸೌಹಾರ್ದ ನೆಲೆಸಬೇಕೆಂದರೆ ಗಾಂಧೀಜಿ ತೋರಿದ ಹಾದಿಯಲ್ಲಿ ಸಾಗುವುದು ನಮ್ಮ ಕರ್ತವ್ಯವಾಗಬೇಕು ಎಂದು ಗಾಂಧೀಜಿಯವರ ಮೊಮ್ಮಗಳು ಸುಮಿತ್ರಾ ಗಾಂಧಿ ಕುಲಕರ್ಣಿ ಅಭಿಪ್ರಾಯಪಟ್ಟರು.

ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ ನಡೆದ ಪುರಸ್ಕಾರ ಸಮಾರಂಭದಲ್ಲಿ ಅವರು ಮಾತನಾಡಿ, 'ಗಾಂಧೀಜಿಯವರ ವಿಚಾರಧಾರೆಯನ್ನು ಅನುಸರಿಸುವ ಎಲ್ಲರೂ ನನ್ನ ಬಂಧುಗಳು; ಅವರೆಲ್ಲರೂ ಗಾಂಧೀಜಿಯವರ ಪರಿವಾರದವರು' ಎಂದು ಮಾರ್ಮಿಕವಾಗಿ ನುಡಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾದ ಡಾ। ವೂಡೇ ಪಿ.ಕೃಷ್ಣ ಅವರಿಗೆ 'ಗಾಂಧಿ ಪುದುವಟ್ಟು ಪ್ರಶಸ್ತಿ' ನೀಡಲಾಯಿತು. ಸನ್ಮಾನ ಸ್ವೀಕರಿಸಿದ ಬಳಿಕ ಅವರು 'ಗಾಂಧೀಜಿಯವರದು ತ್ಯಾಗಮಯ, ನಿಷ್ಕಳಂಕ ಜೀವನ. ಅವರು ನಮಗೆ ಆದರ್ಶ ಮತ್ತು ಸ್ಫೂರ್ತಿಯ ಸೆಲೆ. ಅವರನ್ನು ನಾವೆಲ್ಲರೂ ಅನುಸರಿಸೋಣ. ಅವರ ಹೆಸರಲ್ಲಿ ನೀಡುತ್ತಿರುವ ಪ್ರಶಸ್ತಿಯನ್ನು ಸ್ವೀಕರಿಸಿ, ನನಗೆ ಅತೀವ ಸಂತೋಷವಾಗಿದೆ' ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ। ಮನು ಬಳಿಗಾರ್ ವಹಿಸಿದ್ದರು. ಗಾಂಧಿ ಪುದುವಟ್ಟು ಸ್ಥಾಪಕ ಎ.ಆರ್.ನಾರಾಯಣಘಟ್ಟ, ಸಾಹಿತಿ ಪಿ.ಕೆ.ನಾರಾಯಣ, ವರದಾ ಶ್ರೀನಿವಾಸ್ ಮೊದಲಾದವರು ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

■



ಆರು ಮುಖ್ಯ ಅಂಶಗಳು


ಒಂದು

1948ರ ಜನವರಿ 30ರಂದು ಮತಾಂಧ ನಾಥೂರಾಮ್ ಗೋಡ್ಸೆ ಹಾರಿಸಿದ ಗುಂಡಿಗೆ ಬಲಿಯಾದ ಗಾಂಧೀಜಿ ಪಾರ್ಥಿವ ಶರೀರದ ಮೆರವಣಿಗೆಯು ಎಂಟು ಕಿ.ಮೀ. ಉದ್ದ ಇತ್ತು.

ಎರಡು

ಪ್ರಪಂಚದ ನಾಲ್ಕು ಖಂಡಗಳಲ್ಲಿನ ಹನ್ನೆರಡು ದೇಶಗಳಲ್ಲಿ ನಾಗರಿಕ ಹಕ್ಕು ಚಳವಳಿ ನಡೆಯುವುದಕ್ಕೆ ಗಾಂಧೀಜಿ ನಿಮಿತ್ತರಾಗಿದ್ದಾರೆ.





ಮೂರು

ಭಾರತ ದೇಶಕ್ಕೆ ಸ್ವಾತಂತ್ರ್ಯ ಪಡೆದುಕೊಳ್ಳಲು ತನ್ನ ವಿರುದ್ಧ ಹೋರಾಟ ನಡೆಸಿದ ಗಾಂಧೀಜಿ ಗೌರವಾರ್ಥವಾಗಿ ಗ್ರೇಟ್ ಬ್ರಿಟನ್ ಅವರ ಮರಣಾನಂತರದ 21ನೇ ವರ್ಷದಲ್ಲಿ ಅಂಚೆ ಚೀಟಿ ಹೊರಡಿಸಿತು.

ನಾಲ್ಕು




ಗಾಂಧೀಜಿ ತಮ್ಮ ಜೀವನದ ಪ್ರತಿ ದಿನ 18 ಕಿ.ಮೀ.ನಷ್ಟು ದೂರ ನಡೆದಿದ್ದಾರೆ. ಇಷ್ಟು ದೂರವನ್ನು ನಡೆದು ಯಾರಾದರೂ ಪ್ರಪಂಚವನ್ನು ಎರಡು ಬಾರಿ ಸುತ್ತು ಹಾಕಬಹುದು.

ಐದು




ಗಾಂಧೀಜಿ ಬೋಅರ್ ಯುದ್ಧದಲ್ಲಿ ಭಾಗಿಯಾಗಿದ್ದರು. ಅನಂತರವೇ ಅವರು ಯುದ್ಧ ಉಂಟು ಮಾಡುವ ಹಿಂಸೆಯನ್ನು ಮನಗಂಡು, ಜೀವನಪೂರ್ತಿ ಯುದ್ಧವಿರೋಧಿ ನಿಲುವು ತಳೆದರು.

ಆರು



ಗಾಂಧೀಜಿ ಹೆಸರನ್ನು ಭಾರತದಲ್ಲಿ 5300ಕ್ಕೂ ಹೆಚ್ಚು ರಸ್ತೆಗಳಿಗೆ ಮತ್ತು ವಿವಿಧ ದೇಶಗಳಲ್ಲಿ 48 ಪ್ರಮುಖ ರಸ್ತೆಗಳಿಗೆ ಇಡಲಾಗಿದೆ.



ವಿವಿಧ ಕಡೆ ನಡೆದ ಗಾಂಧೀ ವಿಚಾರ ಸಂಸ್ಕಾರ ಪರೀಕ್ಷೆ



ನಮ್ಮಲ್ಲಿ ಮಾರಾಟಕ್ಕೆ ಲಭ್ಯವಿರುವ ಪುಸ್ತಕಗಳು

ಗಾಂಧೀಜಿ ರಚಿಸಿದ ಕೃತಿಗಳು

An Autobiography	Rs.60/
From Yervda Mandir	Rs.10/
Construtive Programmes	Rs.10/-
My Story of my life	Rs.30/-
Satyagraha in South Africa	Rs.35/
Character and Nation Building	Rs.10/-
Hind Swaraj or Indian Home Rule	Rs.30/-
Sarvodaya and its Principles	Rs.15/-
Autobiography Abridged	Rs.15/-
Trusteeship	Rs.10/-
Panchayat Raj	Rs.10/-
Village Industries	Rs.10/-

ಗಾಂಧೀಜಿ ಜೀವನ ಮತ್ತು ಚಿಂತನೆ ಕುರಿತ ಕೃತಿಗಳು

Selection From Gandhi Nirmal Kumar Bose	Rs.60/-
My Gandhi Narayana Desai	Rs.100/-
Gandhiji biography Abridged Bharatan Kumarappa	Rs/-40
Gandhiji Life In His Own Words Krishna Kripalani	Rs.15/-
Independence and Social Justice RajMohan Gandhi	Rs.30/-
Truth is God R.K. Prabhu	Rs.60/-
Gandhi & Marx K.G. Mashruwala	Rs.60/-

BAAPU PRPANCHA
Printed, Published and Edited by
E.Basavaraju
on behalf of
Karnataka Gandhi Smarak Nidhi, Bengaluru
Printed at Gokul Sri Printers
No.6/9 A, 2nd Main, 8th Cross, Govindarajanagar Magadi Main Road, Bengaluru-560 040
Published at
Karnataka Gandhi Smarak Nidhi, Gandhi Bhavan, Kumara Park East
Bengaluru-560 001